Reg. No. M. 1550

17—4—1936

IF NOT delivered please return to "KODAGU" OFFICE, MERCARA.

KODAGU

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಸಂಪುಟ ೧೫] ಮಡಿಕೇರಿ, ತಾ. ೧೭—೪—೧೯೩೬ [ಸಂಚಿಕೆ ೪೦

Telephon; 3145

By Appointment To H. E The Governor of Madras.

Telegrams: 'PRECIOUS.'

Brooch



Necklace.

Ring.

Ring.

V. SUBRAMANIA IYER.

Jeweller, & Diamond Merchant,

52-21 2 & 3 Kuppumuthu Street Tiruvateswaranpet. POST B X 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI.

BRANCHES:—

1. Madras,
2. Coondapoor.
3. Car Street, Mangalore,
4. Bunder, Mangalore.
5. Shimoga.
6. Udipi
7. Mercara.
8. Virarajendrapet.

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,64,644.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.

Paid up Rs. 2,87,435.

Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—22 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%

ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ " 20%

ಪಾಲಿಸಿಯ ಶರತ್ತುಗಳು ಅತೀ ಸುಲಭ

ಅಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.

ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ.

ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಸಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್).

ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ಎನ್ ಎಸ್ ಅಯ್ಯಂಗಾರ್.

ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ

52—21

ಲಕ್ನೋ ಕಾಂಗ್ರೆಸ್ ಅಧಿವೇಶನ

ಮೋತಿನಗರದ ಭವ್ಯ ದೃಶ್ಯಗಳು

ಅಧ್ಯಕ್ಷರಿಗೆ ಪ್ರಚಂಡ ಸತ್ಕಾರ.



ಲಕ್ನೋ ಕಾಂಗ್ರೆಸ್ ಅಧ್ಯಕ್ಷರಾದ ಜವಾಹರಲಾಲರು.

ಈ ತಾ. 12ನೇ ಆದಿತ್ಯವಾರ ಸಾಯಂಕಾಲ 6 ಗಂಟೆಗೆ ಹಿಂದೀ ರಾಷ್ಟ್ರೀಯ ಮಹಾ ಸಭೆಯ 49ನೇ ಅಧಿವೇಶನವು ಲಕ್ನೋದಲ್ಲಿ ಈ ಮೊದಲೇ ನಿಶ್ಚಯಿಸಲ್ಪಟ್ಟಂತೆ ಸೇರಿತು. ಅಧಿವೇಶನದ ಅಧ್ಯಕ್ಷರಾದ ಶ್ರೀಯುತ ಪಂಡಿತ ಜವಹರ್‌ಲಾಲರನ್ನು ಜಯಘೋಷ ವಾದ್ಯಗಳೊಡನೆ ವೈಭವದಿಂದ ಮೆರವಣಿಗೆಯಲ್ಲಿ ತಂದು ಅಧ್ಯಕ್ಷ ಪೀಠದಲ್ಲಿರಿಸಲಾಯಿತು. 'ಜವಹರ್‌ಲಾಲ್—ಕಿ—ಜೈ' ಎಂಬ ಜಯ ಘೋಷವು ದಿಗಂಬರವನ್ನು ಭೇದಿಸುವಂತಿತ್ತು. ಅಧ್ಯಕ್ಷರಿಗೆ ಯಥೇಚ್ಛವಾಗಿ ಪುಷ್ಪಾಹಾರಗಳಿಂದ ಸನ್ಮಾನಿಸಲಾಯ್ತು. ಅಧ್ಯಕ್ಷರು ಬಹಳ ನಮ್ರಭಾವದಿಂದ ದೇಶವೇ ಇಚ್ಛೆಪಟ್ಟು ಸಲ್ಲಿಸಿದ ಸನ್ಮಾನಗಳನ್ನು ತಲೆಬಾಗಿ ಸ್ವೀಕರಿಸುತ್ತಿದ್ದರು. ಮಹಾತ್ಮಗಾಂಧಿಯವರೂ ಸಹ ಈ ಅಧಿವೇಶನಕ್ಕೆ ಚಿತ್ತೈಸಿದ್ದರು. ದೇಶದ ಅನೇಕ ಮುಂದಾಳಗಳೂ ಹಾಜರಿದ್ದರು.

ಸಭಾ ಮಂಟಪದಲ್ಲಿ ಏರ್ಪಟ್ಟಿದ್ದ ಎತ್ತರವಾದ ವೇದಿಕೆಯಲ್ಲಿ ಕಾಂಗ್ರೆಸು ಕಮಿಟಿಯ ಸದಸ್ಯರುಗಳಿಗೂ ವರ್ಕಿಂಗ್ ಕಮಿಟಿಯ ಸದಸ್ಯರುಗಳಿಗೂ ಮತ್ತು ಲಕ್ನೋ ಕಾಂಗ್ರೆಸಿನ ಸ್ವಾಗತ ಕಮಿಟಿಯ ಸದಸ್ಯರುಗಳಿಗೂ ಸ್ಥಳವೇರ್ಪಟ್ಟಿತ್ತು. ವೇದಿಕೆಯ ಎದುರುಗಡೆಯ ಅರ್ಧ ವರ್ತುಲಾಕಾರದ ರಂಗದಲ್ಲಿ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಸ್ಥಳವೇರ್ಪಟ್ಟಿತ್ತು.

ಅಧಿವೇಶನಕ್ಕೆ ಒಟ್ಟು 855 ಮಂದಿ ಪ್ರತಿನಿಧಿಗಳು ಬಂದಿದ್ದರು.

ಪ್ರಥಮದಲ್ಲಿ 'ವಂದೇ ಮಾತರಂ' ಗೀತೆಯು ಹಾಡಲ್ಪಟ್ಟಿತು. ಅನಂತರ ಸ್ವಾಗತಾಧ್ಯಕ್ಷರಾದ ಶ್ರೀಯುತ ಶ್ರೀ ಪ್ರಕಾಶರು ತಮ್ಮ ಸ್ವಾಗತ ಭಾಷಣವನ್ನು ಓದಿದರು. (ಇದರ ಸಾರಾಂಶವು ಇನ್ನೊಂದೆಡೆಯಲ್ಲಿ ಕೊಡಲಾಗಿದೆ)

ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿದರು ಅವರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲೂ ಹಿಂದೀಯಲ್ಲೂ ಅಚ್ಚು ಹಾಕಿಸಿಟ್ಟಿದ್ದರು. ಅವರು ಅಧಿವೇಶನದಲ್ಲಿ ತಮ್ಮ ಅಧ್ಯಕ್ಷ ಭಾಷಣವನ್ನು ಹಿಂದೀಯಲ್ಲೇ ಮಾಡಿದರು. ಅವರು 2½ ತಾಸುಗಳ ವರೆಗೆ ಭಾಷಣವಿತ್ತರು. (ಇದರ ಸಾರಾಂಶ ಇನ್ನೊಂದು ಕಡೆಯಲ್ಲಿ ಕೊಡಲಾಗಿದೆ.)

ತಾ. 13ನೇ ಸೋಮವಾರ.

ತಾ. 13ನೇ ಸೋಮವಾರ ಸಾಯಂಕಾಲ 5—30ಕ್ಕೆ ಕಾಂಗ್ರೆಸು ಅಧಿವೇಶನವು ಪ್ರಾರಂಭವಾಯ್ತು.

ಪ್ರಥಮತಃ ಜಲಿಯನ್ ವಾಲಾಬಾಗ್ ದಿನವನ್ನು ಆಚರಿಸುವ ನಿಮಿತ್ತ 2 ನಿಮಿಟುಗಳ ವರೆಗೆ ಎಲ್ಲರೂ ಎದ್ದು ನಿಂತು ಮೌನವನ್ನಾಚರಿಸಿದರು.

ಅನಂತರ ಅಧ್ಯಕ್ಷರಿಂದಲೇ ಈ ಕೆಳಗಿನ ತೀರ್ಮಾನಗಳು ಸೂಚಿಸಲ್ಪಟ್ಟು ಒಮ್ಮತದಿಂದ ಪಾಸಾಯಿತು. ಅವು ಯಾವುವೆಂದರೆ:—

(1) 'ದೇಶೀಯರ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಮೂಲೆಗೊತ್ತಿರುವದರ ನಿಷೇಧ'

(2) 'ಆ ಭಾ. ಕಾಂಗ್ರೆಸು ಕಮಿಟಿಯು ಒಂದು ಶಾಖೆಯನ್ನು ಪಶ್ಚಿಮಾಫ್ರಿಕದಲ್ಲಿ ತೆರೆಯಬೇಕು.'

(3) 'ಜಗತ್ತಿನ ಶಾಂತಿಸ್ಥಾಪನೆಯ ಪರಿಷತ್ತಿಗೆ ಬಂದಿರುವ ಆಹ್ವಾನವನ್ನು ಸ್ವೀಕರಿಸುವುದು.'

(4) 'ಯುದ್ಧದ ಸಮಯದಲ್ಲಿ ಹಿಂದೂದೇಶವು ಬ್ರಿಟೀಷ್ ಸಾಮ್ರಾಜ್ಯದ ಹಿತದ ದೃಷ್ಟಿಯಿಂದ ಯುದ್ಧಕ್ಕೆ ಬೆಂಬಲವಾಗುವಂತೆ ನಿರ್ಬಂಧಿಸಲ್ಪಡದಂತೆ ಕಾಂಗ್ರೆಸು ದೇಶವರ ಹಿತದ ದೃಷ್ಟಿಯಿಂದ ವರ್ತಿಸಬೇಕು.'

(5) 'ಅಬಿಸೀನಿಯಾದಲ್ಲಿ ಇಟಲಿಯವರು ನಿಷ್ಕಾರಣವಾಗಿ ನಡೆಸುತ್ತಿರುವ ಹತ್ಯಾಕಾಂಡವನ್ನು ನಿಷೇದಿಸುವದಲ್ಲದೆ ಅಬಿಸೀನಿಯಾಕ್ಕೆ ಈ ಸಭೆಯು ತನ್ನ ಸಹಾನುಭೂತಿಯನ್ನು ಈ ಮೂಲಕ ಪ್ರದರ್ಶಿಸುತ್ತದೆ.'

ಅಧಿಕಾರ ಸ್ವೀಕಾರದ ಚರ್ಚೆ.



ಬಾಬು ರಾಜೇಂದ್ರ ಪ್ರಸಾದ್.

ಇಂಡಿಯಾಸಂಕಾರಶಾಸನದ ಸಂಬಂಧವಾಗಿ ವರ್ಕಿಂಗ್ ಕಮಿಟಿಯವರು ರೂಪಿಸಿದ್ದ ನಿರ್ಣಯವನ್ನು ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಮಹಾಸಭೆಯ ಮುಂದಿಟ್ಟು ನಿರ್ಣಯವನ್ನೋದಿ ಅದರ ಉದ್ದಿಶ್ಯಗಳನ್ನು ವಿವರಿಸಿದರು. ಚರ್ಚೆಗಳೆಲ್ಲ ಮುಗಿದ ಮೇಲೆ ತಾವು ಉತ್ತರ ಕೊಡುವುದಾಗಿ ತಿಳಿಸಿದರು.

ಅನೇಕಮಂದಿ ವಿಷಯ ನಿಯಾಮಕ ಸಮಿತಿಯ ಮುಂದೆ ತಿಳಿಸಿದ್ದ ಅಂಶಗಳನ್ನೇ ಇಲ್ಲಿಯೂ ಹೇಳಿದರು.

ಈ ಸಂಬಂಧವಾಗಿ ೪ ತಿದ್ದುಪಡಿಗಳು ಒಂದಿವೆಯೆಂದು ಪಂಡಿತ ಜವಾಹರಲಾಲರು ತಿಳಿಸಿದರು. ಈ ಸಂಬಂಧವಾಗಿ ಪೂರ್ಣ ಚರ್ಚೆಯಾಗಬೇಕೆಂದೂ ಆದರೆ ಈ ದಿನವೇ ವಿಷಯಗಳ ಚರ್ಚೆಯನ್ನೆಲ್ಲ ಮುಗಿಸಲು ತಾವು ಯತ್ನಿಸುವುದಾಗಿಯೂ ತಿಳಿಸಿದರು.

ಶ್ರೀ ಟಿ. ಪ್ರಕಾಶಂರವರು ನಿರ್ಣಯಕ್ಕೆ ಬೆಂಬಲವಿತ್ತು, "ಅಧಿಕಾರ ಸ್ವೀಕಾರ ಮಾಡುವುದರಿಂದ ಏಳಕ್ಕೆ ಹಳ್ಳಿಗಳಲ್ಲಿ ಕಾಂಗ್ರೆಸ್ ಸಮಿತಿಗಳನ್ನು ಸ್ಥಾಪಿಸಲು ನಮಗೆ ಸಾಧ್ಯವಾಗುತ್ತದೆ. ಆ ಹಳ್ಳಿಗಳ ಜನರು ಈಗ ಚಿತ್ರಹಿಂಸೆಯನ್ನು ಅನುಭವಿಸುತ್ತಿದ್ದಾರೆ." ಎಂದರು.

ಶ್ರೀ ಶಾರ್ದೂಲಸಿಂಗರು ಶ್ರೀಮತಿ ಕಮಲಾದೇವಿಯವರ ತಿದ್ದುಪಡಿಯನ್ನು ಸಭೆಯ ಮುಂದಿಟ್ಟು "ಈ ವಿಚಾರದಲ್ಲಿ ಮಾಡಬೇಕಾದ ಕಟ್ಟಕಡೆಯ ತೀರ್ಮಾನವನ್ನು ಮುಂದಕ್ಕೆ ತಳ್ಳಲಾಗದು" ಎಂದು ವಿರೋಧಿಸಿದರು. ಅಧಿಕಾರ ಸ್ವೀಕಾರ ಮಾಡಲಾಗದೆಂದೂ ತಕ್ಷಣವೇ ನಿರ್ಧರಿಸಿಬಿಡಬೇಕೆಂದು ಅವರು ಒತ್ತಿ ತಿಳಿಸಿದರು.

ಶ್ರೀ ಸಂಪೂರ್ಣಾನಂದರು ಒಂದು ತಿದ್ದುಪಡಿಯನ್ನು ತಂದರು. ಧ್ವಂಸಮಾಡುವ ನೀತಿಯನ್ನು ಕಾಂಗ್ರೆಸಿನವರು ಅನುಸರಿಸಬೇಕೆಂಬುದೇ ಅದರ ಸಾರಾಂಶ. ಅಧಿಕಾರ ಸ್ವೀಕಾರ ಮಾಡಿದ ಪಕ್ಷದಲ್ಲಿ ನೀತಿಗೇಡಂಟಾಗಿ, ಕಪಿಯೂಟಕ್ಕಾರಂಭವಾಗುವುದೆಂದರು.

ಈ ದಿನ ಮೌನ ದಿನಾಚರಣೆಯಾದುದರಿಂದ ಗಾಂಧಿಜಿಯವರು ಈ ದಿನದ ಸಭೆಗೆ ಬಂದಿರಲಿಲ್ಲ.

ಮುಖ್ಯ ನಿರ್ಣಯದ ಮೇಲೆ ಸುಮಾರು 7 ಗಂಟೆಗಳ ಕಾಲ ಚರ್ಚೆಗಳು ನಡೆದವು. ಶ್ರೀ ಮದನ ಮೋಹನ ಮೂಲವೀಯ, ಶ್ರೀ ಬಾಬು ರಾಜೇಂದ್ರ ಪ್ರಸಾದ್, ಶ್ರೀ ಕೃಪಾಲಿನಿ, ಶ್ರೀ ಸತ್ಯಮೂರ್ತಿ, ಶ್ರೀ ಟಿ. ಪ್ರಕಾಶಂ, ಡಾ. ಖಾನ್‌ಸಾಹೇಬ್, ಶ್ರೀ ಶಾರ್ದೂಲ ಸಿಂಗ್, ಶ್ರೀ ಸಂಪೂರ್ಣಾನಂದ್, ಶ್ರೀ ಅನ್ನಪೂರ್ಣಯ್ಯ, ಶ್ರೀ ಚಕ್ರವರ್ತಿ, ಶ್ರೀ ಎಂ. ಆರ್. ಮಸಾನಿ ಶ್ರೀ ವೆ ಹರಿಹರಿ, ಶ್ರೀ ಬಾಸಪ್ಪ, ಶ್ರೀ ಭಟ್ಟಾಚಾರಿ, ಶ್ರೀ ಗೋಪಿಕೇಶನ್, ಶ್ರೀ ಪಟವರ್ಧನ್ ಮುಂತಾದ 17 ಮಂದಿ ಸದಸ್ಯರು ಚರ್ಚೆಗಳಲ್ಲಿ ಭಾಗ ವಹಿಸಿದ್ದರು. ಮುಖ್ಯ ನಿರ್ಣಯಕ್ಕೆ 4 ತಿದ್ದುಪಡಿಗಳು ತರಲಾಯಿತು. ಅವುಗಳ ವೈಕ್ಯ 3 ತಿದ್ದುಪಡಿಗಳು ಒಂದೇ ರೀತಿಯಾಗಿದ್ದವು. ಮತ್ತು ಅವುಗಳೆಲ್ಲವೂ ವಿಷಯನಿಯಾಮಕ ಸಮಿತಿಯಲ್ಲಿ ತಿರಸ್ಕರಿಸಲ್ಪಟ್ಟಿದ್ದವು. ಕೋಮುವಾರು ನಿರ್ಧಾರದ ವಿಷಯವಾಗಿ ತಂದ ತಿದ್ದುಪಡಿಯೇ ಹೊಸದಾಗಿತ್ತು.

ಮದನಮೋಹನ ಮೂಲವೀಯರು.

ಶ್ರೀ ಪಂಡಿತ ಮದನಮೋಹನ ಮೂಲವೀಯರು ಮೊತನಾಡುತ್ತಾ, 'ನೂತನ ರಾಜ್ಯಾಂಗವ್ಯವಸ್ಥೆಯನ್ನು ತಿರಸ್ಕರಿಸಿದ ಮೇಲೆ, ಸಚಿವ ಸೂತ್ರಗಳನ್ನು ವಹಿಸುವುದು ತಪ್ಪು, ವಹಿಸಕೂಡದು' ಎಂಬದಾಗಿ ನಡೆದಂ ಕೋಮುವಾರು ನಿರ್ಧಾರಕ್ಕೆ ಒಂಗಾಳದ ತಿದ್ದುಪಡಿಯನ್ನು ಸೇರಿಸಬೇಕೆಂದೂ, ಕಾಂಗ್ರೆಸ್ ಇತರ ಪಕ್ಷಗಳೊಡನೆ ಸಹಕರಿಸಬೇಕೆಂದೂ, ಹಾಗೆ ಮಾಡಿದ ಪಕ್ಷದಲ್ಲಿ 6 ತಿಂಗಳೊಳಗಾಗಿ ಬ್ರಿಟಿಷ್ ಸರಕಾರದವರು ಶಾಂತಿ ಸ್ಥಾಪನೆಗೆ ಒರುವರೆಂದೂ ಸೂಚಿಸಿದರು.

ಪಟೇಲರ ಉತ್ತರ.

ಶ್ರೀ ಪಂಡಿತ ಮದನ ಮೋಹನ ಮೂಲವೀಯರಿಗೆ ಶ್ರೀ ಪಟೇಲರವರಿಗೆ ಉತ್ತರ ಕೊಡುತ್ತಾ,

'ಕೋಮುವಾರು ನಿರ್ಧಾರದ ವಿಚಾರವಾಗಿ ಕಾಂಗ್ರೆಸಿನವರು ಅನುಮೋದಿಸುವ ತಾಟಸ್ಥ್ಯಭಾವನೆಯನ್ನು ತ್ಯಜಿಸಿ ಬಂಗಾಳದ ತಿದ್ದುಪಡಿಯನ್ನು ಅನುಮೋದಿಸಿದ ಪಕ್ಷದಲ್ಲಿ ಬಂಗಾಳಕ್ಕೆ ಸಹಾಯವಾಗುವುದಿರಲಿ, ದೇಶದ ವಾತಾವರಣವನ್ನೇ ಕುಲಗೆಡಿಸಿ ಕಾಂಗ್ರೆಸ್ ಯಾವ ಧ್ಯೇಯವನ್ನಿಟ್ಟುಕೊಂಡು ಹೊಡೆದಾಡುತ್ತಿದೆಯೋ ಆ ಧ್ಯೇಯಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡುವುದು' ಎಂಬದಾಗಿ ಸೂಚಿಸಿದರು. ಕಾಂಗ್ರೆಸಿನವರು ಸಚಿವ ಸೂತ್ರಗಳನ್ನು ವಹಿಸುವ ವಿಚಾರವೆತ್ತಿ, ಶ್ರೀ ಪಟೇಲರು 'ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಸದಸ್ಯರಲ್ಲಿ ಯಾರೂ ಶಾಸನ ಸಭೆಗಳನ್ನು ಪ್ರವೇಶಿಸಿ, ಸಚಿವ ಸೂತ್ರಗಳನ್ನು ವಹಿಸುವ ಇಷ್ಟವುಳ್ಳವರಾಗಿಲ್ಲ ಆದರೆ ಆ ರೀತಿ ಮಾಡಬೇಕಾದ ಸಮಯ ಬಂದೊದಗಬಹುದು ಹಾಗೆ ಮಾಡುವುದರಿಂದ ಪ್ರಯೋಜನ ಉಂಟಾಗಬಹುದಾದ ಸಂಭವ ಬರಬಹುದು. ಈ ವಿಚಾರದಲ್ಲಿ ಕಾಂಗ್ರೆಸ್ ವರ್ಕಿಂಗ್ ಸಮಿತಿಯನ್ನು ನಂಬಬೇಕು' ಎಂದು ಸೂಚಿಸಿದರು.

ಮಧ್ಯರಾತ್ರಿಯಾದ ಮೇಲೆ ಎಲ್ಲ ತಿದ್ದುಪಡಿಗಳನ್ನೂ, ಮುಖ್ಯ ನಿರ್ಣಯವನ್ನೂ ಓಟಿಗೆ ಹಾಕಲಾಯಿತು. ತಿದ್ದುಪಡಿಗಳೆಲ್ಲ ತಿರಸ್ಕರಿಸಲ್ಪಟ್ಟವು. ಶ್ರೀ ಸಂಪೂರ್ಣಾನಂದರವರು ತಂದಿದ್ದ 'ನೂತನ ರಾಜ್ಯಾಂಗ ವ್ಯವಸ್ಥೆಯನ್ನು ಮುರಿಯುವುದಕ್ಕೆ ಕಾಂಗ್ರೆಸಿನವರು ಶಾಸನ ಸಭೆಗಳನ್ನೂ ಪ್ರವೇಶಿಸಬೇಕು' ಎಂಬ ತಿದ್ದುಪಡಿಯು ಓಟಿಗೆ ಹಾಕಲಾಯಿತು. ಓಟು ತೆಗೆದುಕೊಳ್ಳಲಾಗಿ 225 ಮಂದಿ ಸದಸ್ಯರು ಪರವಾಗಿಯೂ, 487 ಮಂದಿ ಸದಸ್ಯರು ವಿರೋಧವಾಗಿಯೂ ಓಟುಗಳನ್ನು ಕೊಟ್ಟ ಪ್ರಯುಕ್ತ ತಿದ್ದುಪಡಿಯು ಬಿದ್ದುಹೋಯಿತು.

'ವರ್ಕಿಂಗ್ ಸಮಿತಿಯವರ ನಿರ್ಣಯವು ಬಹುಮತದಿಂದ ಸಭೆಯ ಜಯಜಯಕಾರಧ್ವನಿಯೊಡನೆ ಅಂಗೀಕರಿಸಲ್ಪಟ್ಟಿತು. ಮಧ್ಯರಾತ್ರಿ 1 ಗಂಟೆ ಸಮಯಕ್ಕೆ ಸಭೆಯನ್ನು ಮುಂದೂಡಲಾಯಿತು.

ತಾ. 14ನೇ ಸೋಂಗಳವಾರ.

ಕಾಂಗ್ರೆಸ್ ಅಧಿವೇಶನದಲ್ಲಿ ಇಂದು ಹಲವು ನಿರ್ಣಯಗಳು ಅನುಮೋದಿಸಲ್ಪಟ್ಟವು. ಮೊದಲನೆಯ ನಿರ್ಣಯವು ವಿದೇಶಗಳಲ್ಲಿ ನೆಲಸಿರುವ ಭಾರತೀಯರಿಗೆ ಅನ್ವಯಿಸಿದ್ದು ಕಾಂಗ್ರೆಸ್ಸಿಗೂ ಜನಸಾಮಾನ್ಯಕ್ಕೂ. ನಿಕಟ ಸಂಬಂಧವನ್ನು ಕಲ್ಪಿಸಬೇಕೆಂಬ ನಿರ್ಣಯವು ಎರಡನೆಯದು. ಈ ನಿರ್ಣಯವನ್ನು ಚರ್ಚಿಸುವ ಕಾಲದಲ್ಲಿ, ಶ್ರೀ ಸಂಪೂರ್ಣಾನಂದರು ಕಾಂಗ್ರೆಸಿನ ವರ್ಕಿಂಗ್ ಸಮಿತಿಯವರು ತಂದಿದ್ದ ನಿರ್ಣಯಕ್ಕೆ 'ಕಾಂಗ್ರೆಸ್ ವ್ಯವಸ್ಥೆಗೆ, ಕೂಲಿಕಾರರ ಮತ್ತು ಇತರ ಸಂಘಗಳಿಂದ ನೇರವಾಗಿ ಸದಸ್ಯರನ್ನು ಚುನಾಯಿಸಬೇಕು' ಎಂಬ ತಿದ್ದುಪಡಿಯನ್ನು ತಂದರು. ಆದರೆ ತಿದ್ದುಪಡಿಯು ಬಿದ್ದು ಹೋಯಿತು. ವಿಷಗು ನಿಯಾಮಕ ಸಮಿತಿಯಲ್ಲಿ ಅನುಮೋದಿಸಲ್ಪಟ್ಟ ಕಾಂಗ್ರೆಸ್ ವರ್ಕಿಂಗ್ ಸಮಿತಿಯ ನಿರ್ಣಯಕ್ಕೆ ಬೆಂಬಲ ದೊರಕಿತು.

ಆರ್ಥಿಕ ಕಾರ್ಯಕ್ರಮ

ಅನಂತರ ಆರ್ಥಿಕ ಕಾರ್ಯಕ್ರಮದ ವಿಷಯವಾಗಿ ಕಾಂಗ್ರೆಸ್ ಸಮಿತಿಯವರೂ ವಿಷಯ ನಿಯಾಮಕ ಸಮಿತಿಯವರು ಅನುಮೋದಿಸಿದ್ದ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಇದೂ ಕೂಡ ಮಂಜೂರುಮಾಡಲ್ಪಟ್ಟಿತು.

ದೇಶೀಯ ಸಂಸ್ಥಾನಗಳು.

ಅನಂತರ ದೇಶೀಯ ಸಂಸ್ಥಾನಗಳ ವಿಷಯವಾಗಿ ವರ್ಕಿಂಗ್ ಸಮಿತಿಯವರು ಅನುಮೋದಿಸಿದ್ದ ನಿರ್ಣಯವು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ಇದಕ್ಕೆ ಯಥಾ ಪ್ರಕಾರ ಶ್ರೀ ಅಮೃತಲಾಲ್ ಸೇಠ್‌ರವರು ಒಂದು ತಿದ್ದುಪಡಿ ತಂದರು. ಇದರ ಮೇಲೆ ಒಹಳ ಚರ್ಚೆಗಳು ನಡೆದವು ಶ್ರೀ ಅಮೃತಲಾಲ್ ಸೇಠ, ಶ್ರೀ ವಲ್ಲಭಾಯಿ ಪಟೇಲ್, ಶ್ರೀ ಜಮ್ನಲಾಲ್ ಬಜಾಜ್ ಮತ್ತು ಇತರ ಹಲವು ಸದಸ್ಯರು ಭಾಗ ವಹಿಸಿದ್ದರು. ಆದರೆ ಕೊನೆಗೆ ಶ್ರೀ ಅಮೃತಲಾಲ್ ಸೇಠರ ತಿದ್ದುಪಡಿಯು ಬಿದ್ದುಹೋಯಿತು. ೧೬೦ ಮಂದಿ ಸದಸ್ಯರು ತಿದ್ದುಪಡಿಯ ಪರವಾಗಿಯೂ ೨೫೦ ಮಂದಿ ಸದಸ್ಯರು ವಿರೋಧವಾಗಿಯೂ ಓಟುಗಳನ್ನು ಕೊಟ್ಟರು.

ಉಳಿದಿರುವ ನಿರ್ಣಯಗಳು.

ಇನ್ನೂ ಉಳಿದಿರುವ ನಿರ್ಣಯಗಳು ಎರಡು. ಮಹಾರಾಷ್ಟ್ರದಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ನಡೆಸಬೇಕೆಂಬ ನಿರ್ಣಯವು ಮೊದಲನೆಯದು. ಕಾಂಗ್ರೆಸ್ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಬೇಕೆಂಬುದು ಎರಡನೆಯದು. ಈ ಎರಡನೆಯ ನಿರ್ಣಯಕ್ಕೆ ಸೋಷಿಯಲಿಷ್ಟ್ ಪಕ್ಷದವರು ಕೆಲವು ತಿದ್ದುಪಡಿಗಳನ್ನೂ ತರಬೇಕೆಂದು ನಿರ್ಧರಿಸಿರುವರು. ಅಖಿಲಭಾರತ ಕಾಂಗ್ರೆಸ್ ಸಂಸ್ಥೆಗೆ 'ಪ್ರಪೋರ್ಷನಲ್ ರೆಪ್ರಸೆಂಟೇಷನ್' ಮೂಲಕ ಸದಸ್ಯರನ್ನು ಚುನಾಯಿಸಬೇಕೆಂಬ ತಿದ್ದುಪಡಿಯನ್ನು ಹೇಗಾದರೂ ಮಾಡಿ ಕಾಂಗ್ರೆಸ್ ಅಧಿವೇಶನದಲ್ಲಿ ಪಾಸುಮಾಡಿಸಿಬಿಡಬೇಕೆಂದು ಅವರು ಪ್ರಯತ್ನಪಡುತ್ತಿರುವರು. ಈ ಎರಡು ನಿರ್ಣಯಗಳೂ ಒಹುಮಟ್ಟಿಗೆ ಇಂದು ರಾತ್ರಿ ಮಧ್ಯರಾತ್ರೆ 1½ ಗಂಟೆಗೆ ಕಾಂಗ್ರೆಸು ಅಧಿವೇಶನವು ಮುಕ್ತಾಯಗೊಂಡಿತು.

ESTATE KUMBLIES.

Wholesale Dealers. **Moderate prices,**

We suppiy good and fresh Kumblies direct from the manufacturers in wholesale and cheap rates avoiding the middleman's profits and commission Please place a trial order and compare the favourable rates All orders will be promptly delivered at the Estates at cost price

Please apply to—

Messrs. G NAGAPPA,
Kumbly Merchants & Dealers in
Rugs and Carpets.
Chikpet,
Bangalore City.

4—2

ವಿಜ್ಞಾಪನೆ.

ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಜಮ್ಮ ಓಟರುಗಳಲ್ಲಿ ಪಿ. ಜಿ. ಮುದ್ದಮ್ಮಯ್ಯನ ವಿಜ್ಞಾಪನೆ.

ಈಗ ತಾನೇ ನಮ್ಮ ಕೌನ್ಸಿಲ್‌ನಲ್ಲಿ ಖಾಲಿ ಬಿದ್ದಿರುವ ಒಂದು ಸ್ಥಳಕ್ಕೆ ನಮ್ಮ ತಾಲೂಕಿನ ಪರವಾಗಿ ನಾನೊಬ್ಬ ಉಮೇದ್ವಾರನಾಗಿರುತ್ತೇನೆ. ಸದರಿ ಸ್ಥಳಕ್ಕೆ ತಾವುಗಳೆಲ್ಲರು ತಾರೀಕು 15—5-36 ನೇ ಶುಕ್ರವಾರ ದಿನ ನಿಮ್ಮ ನಿಮ್ಮ ವೋಟಿಂಗ್ ಸ್ಟೇಶನಿಗೆ ದಯವಾಡಿಸಿ ಒಪ್ಪಿಗೆಸ್ಸಿನಿಂದ ತಮ್ಮ ಪೂರ್ತಿ ಒಂದು ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನಾಗಿ ಮಾಡಿ ತಮ್ಮೆಲ್ಲರ ಸೇವೆ ಮಾಡಲು ಅನುಕೂಲಪಡಿಸಿಕೊಡಬೇಕಾಗಿ ವಿನಯಪೂರ್ವಕವಾಗಿ ಬೇಡುತ್ತೇನೆ.

ಪೊನ್ನಂಪೇಟೆ. ಇಂತಿ ತಮ್ಮ ಸೇವಕ,
4—4—36. **ಪಿ. ಜಿ ಮುದ್ದಮ್ಮಯ್ಯ.**

ಸಂತಾನ ನಿರೋಧ

(ಮಹಾತ್ಮ ಗಾಂಧಿಯವರಿಂದ)

ನಮ್ಮ ಸಮಾಜವು ಇಂದ್ರಿಯ ನಿಗ್ರಹವನ್ನು ಮೂಲ ಮಂತ್ರವಾದ ಸಾಧನೆಯನ್ನೂ ಪ್ರಪಂಚಕ್ಕೆ ತೋರಿಸಿಲ್ಲ. ಜನನದಾಬ್ಯ ನಮ್ಮಲ್ಲಿ ಅದರ ವಿಪರೀತ ವಿಪರ್ಯಾಸಗಳೇ ಹೂತುಹೋಗಿ ಇಂದ್ರಿಯನಿಗ್ರಹಕ್ಕೆ ಎಡೆಯಿಲ್ಲದಂತೆ ಮಾಡಿದೆ. ಇದಕ್ಕೆ ಮೂಲಕಾರಣರು ನಮ್ಮ ಹಿರಿಯರು. ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ಮದುವೆಮಾಡಿಸಿ, ಅವರು ಸಂಸಾರಿಗಳಾಗಿ ಬಾಳುವ ಜೀವನವನ್ನು ನೋಡಿ ಸುಖಸಂತೋಷವಿಂದಿರಬೇಕೆಂಬ ಈ ಆಲೋಚನೆಯು ಅವರನ್ನು ಆವರಿಸಿರದಿದ್ದರೆ ತರುಣರಾಕ್ಷಸೀ ಕಾಂಕ್ಷೆಯು ಕಿರಿಯವರ ಆತ್ಮಘಾತನವನ್ನು ಮಾಡುತ್ತದೆಂದು ಮಾತ್ರ ಅವರು ತಿಳಿಯುತ್ತಿರಲಿಲ್ಲ. ಹಾಗೂ ಇಂತಹ ಬಾಲ್ಯವಿವಾಹದ ಮದುವೆಗಳಿಂದಾಗಿ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲೇ ಇಂದ್ರಿಯ ನಿಗ್ರಹದ ಬುದ್ಧಿಯು ಜನಿಸುವುದಕ್ಕಿಂತಲೂ ವಿಷಯ ಲಾಲಸೆಯ ಆಶೆಯನ್ನು ಹುಟ್ಟಿಸಿದಂತಾಗುತ್ತದೆಂದು ಅವರು ಬಲ್ಲರೇ? ಇಂತಹ ಬಾಲ್ಯವಿವಾಹದ ಮದುವೆಗಳಿಂದಾಗಿ ಸಂಸಾರವು ದೊಡ್ಡದಾಗಿ ಜೀವನವು ಕಷ್ಟತರವಾಗುತ್ತದೆಂದು ಅವರು ತಿಳಿದಿದ್ದಾರೆಯೆ. ಇಂಥ ಮದುವೆಗಳಿಂದಾಗಿ ಹುಟ್ಟಿದ ಮಕ್ಕಳು ಎಷ್ಟು ಅಬಲರಾಗಿದ್ದು, ಭಾರತ ಪುತ್ರರನ್ನು ನಿರ್ಜೀವಿಗಳನ್ನಾಗಿಯೂ, ಕಾರ್ಯಕ್ಕೆ ಬಾರದಂಹ ಗೊಬೆಗಳನ್ನಾಗಿಯೂ ಮಾಡಿವುದೆಂಬುದು ತಾನೆ ಅವರಿಗೆ ಮುಂದಟ್ಟಾಗಿದೆಯೇ? ಇಂತಹ ಮದುವೆಗಳೆ ದೇಶದ ಸುಪುತ್ರರನ್ನೂ, ಸುಪುತ್ರಿಯರನ್ನೂ ಕೆಲವೇ ವರ್ಷಗಳಲ್ಲಿ ಅವನತಿಯ ಕಡೆಗೆ ಗುರಿಮಾಡುತ್ತವೆಂದು ಅವರು ಬಲ್ಲರೇ? ನಿಜವಾಗಿಯೂ ಇಲ್ಲ. ಹಾಗೆ ವಿಚಾರಿಸಿ ತಿಳಿದಲ್ಲಿ ಭಾರತವು ಇಂತಹ ಅಧೋಗತಿಗೆ ಎಂದಿಗೂ ಇಳಿಯಲಾರದಿತ್ತು. ಮದುವೆಯ ಸ್ಥೈರ್ಯವಾದ ಧ್ಯೇಯವನ್ನಾದರೂ ಅವರು ಅರಿತಿಂದೇಕಿತ್ತು ಮದುವೆಯೆಂದರೆ ಕೇವಲ ವಿಷಯಲಾಲಸೆಯನ್ನು ಪೂರ್ತಿಗೊಳಿಸುವ ಏಕ ಮಾತ್ರ ಸಾಧನವಲ್ಲ. ಅದು ಮೃಗ ತುಲ್ಯ ತೃಪ್ತಿಯೊಗಿದೆ ಅಂತಹ ಮನುಜನು ನಿಜವಾಗಿ ಪವಿತ್ರಾತ್ಮನಾದ ಮಾನವನಲ್ಲ, ಮೃಗ ಮದುವೆಯು ಕೇವಲ ಸಂತಾನಕ್ಕಾಗಿ ಎಂದು ಎಷ್ಟು ಜನರು ತಾನೇ ತಿಳಿದಿರುವರು. ಪ್ರತಿಯೊಂದು ಕಡೆಯಲ್ಲಿಯೂ ಏರ್ಪಟ್ಟ ಸಮಾರಂಭಗಳು, ಸನ್ನಿವೇಶಗಳು ಇಂತಹ ನೀಚ ಕಾರ್ಯಗಳನ್ನು ಅವರ ಕಣ್ಣ ಮುಂದಿರಿಸುತ್ತವೆ. ಎತ್ತ ನೋಡಿದರೂ ಮಾನವನ ಕಣ್ಮುಂದೆ ವಿಷಯ ವಾಸನೆಯ ದೃಶ್ಯಗಳು ನಲಿದಾಡುತ್ತವೆ. ಅಂತಿರುವಾಗ ಅವನು ಇಂದ್ರಿಯನಿಗ್ರಹವನ್ನು ತಾನೆ ಹೇಗೆ ಮಾಡಬಲ್ಲನು! ಈಗಿನ ಮಾನವ ಸುಧಾರಣೆಯ ಕಾಲವಂತೂ ಮಾನವನು ಅಂತಹ ಕಾರ್ಯಕಲಾಪಗಳಲ್ಲಿ ನಿರ್ಲಿಪ್ತನಾಗಿರುವುದು ಪ್ರತಿಯೊಬ್ಬನ ಕರ್ತವ್ಯವೆಂದೂ, ಅದನ್ನು ವರ್ಜಿಸುವುದು ಕೇವಲ ಪಾಪಸಾಧನೆಯೆಂದೂ ಸಾಧಿಸಿರುವದು.

ಇವೆಲ್ಲವುಗಳನ್ನು ದೃಷ್ಟಿಪಥದಲ್ಲಿಟ್ಟು ಆಲೋಚಿಸುತ್ತಿರುವಾಗ ಇಂದ್ರಿಯ ನಿಗ್ರಹ ಕಾರ್ಯವು ಮನುಷ್ಯನಿಗೆ ಕಷ್ಟತರವಾಗಿ ಪರಿಣಮಿಸಿದುದು ಅಂದೊಂದು ವಿಶೇಷ ಸಂಗತಿಯಲ್ಲ. ಇಂದ್ರಿಯ ನಿಗ್ರಹವೂ, ಸಂತಾನ ನಿರೋಧವೂ ನಮ್ಮ ದೇಶಕ್ಕೆ ಒಳ್ಳೇದನ್ನೂ, ನಮಗೆ ಸುಖವನ್ನೂ ಕೊಡುವುದೆಂದಾದ ಪಕ್ಷದಲ್ಲಿ ಸಮಾಜದ ರೀತಿ ನೀತಿಗಳನ್ನೂ ದೇಶದಲ್ಲಿಯ ಯದ್ವಾತದ್ವಾ ದೃಶ್ಯಗಳನ್ನೂ ಸಂಪೂರ್ಣ ತಿದ್ದುಪಡಿ ಮಾಡಬೇಕು. ಇದೆಲ್ಲವೂ ಮನುಷ್ಯರಿಂದಲೇ ಹೊರತು ಇನ್ನಾವ ಕಾರಣಗಳಿಂದಲೂ ಆಗಲಕ್ಕಿಲ್ಲ. ಅದೂ ಒಬ್ಬಿಬ್ಬರು ಪ್ರಯತ್ನಪಟ್ಟರೆ ಸಫಲವಾಗತಕ್ಕ ಸಂಗತಿಯಲ್ಲ. ಯಾರೂ ಮದುವೆಮಾಡಿಕೊಳ್ಳಬಾರದೆಂದು ಈ ಲೇಖನದ ಊಹೆಯಲ್ಲ. ಮದುವೆಯು ಶ್ರೇಷ್ಠವಾದ ವಿಷಯ; ಆದರೆ ಮನುಷ್ಯನು ಅದಕ್ಕಿಂತಲೂ ಅವೋಘವಾದ ಬ್ರಹ್ಮಚರ್ಯದ ಕಡೆಗೆ ಗಮನವಿಡತಕ್ಕದ್ದು. ಅದನ್ನು ಸಂಪೂರ್ಣವಾಗಿ ಕಾಪಾಡಿ ತನ್ನ ಇಂದ್ರಿಯಗಳನ್ನು ತನ್ನ ಸ್ಥಿಮಿತದಲ್ಲಿ ಇಟ್ಟುಕೊಂಡ ನಂತರ ಅವನು ಮದುವೆಯಾಗಬಹುದು. ಇಲ್ಲವಾದರೆ ಅದರಿಂದ ಅನೇಕ ದುಷ್ಪರಿಣಾಮಗಳು ಸಂಭವಿಸಬಹುದು. ಮಕ್ಕಳ ಸಂಖ್ಯೆಯು ಹೆಚ್ಚುವುದು. ಅದರಿಂದಾಗಿ ರೋಗರುಜಿಗಳ ಆರಂಭ, ಸಂಸಾರದಲ್ಲಿ ಅವುಗಳಿಂದಾಗಿ ಉಂಟಾಗುವ ಉತ್ಪಾತಗಳು, ಬಡತನ, ಇತ್ಯಾದಿಗಳಿಂದ ಮನುಷ್ಯನು ಸಂಸಾರವೇ ಬೇಡವೆಂಬ ಹವ್ಯಾಸಕ್ಕೆ ಗಂಟುಬೀಳುತ್ತಾನೆ. ಅಂತೂ ಸಂತಾನ ನಿರೋಧವನ್ನು ಹಲ ಕೆಲವು ಸಾಧನೆಗಳಿಂದ (ಡಾಕ್ಟರರ ಶಸ್ತ್ರಗಳಿಂದ) ಮಾಡಿದ್ದಲ್ಲಿ ಮಕ್ಕಳ ಸಂಖ್ಯೆ ಏನೋ ಕಡಿಮೆ ಮಾಡಬಹುದು ಆದರೆ ಅದುಂದ ತುಂಬಾ ಹಾನಿಯುಂಟು. ಮನುಷ್ಯರು ಈ ಶಸ್ತ್ರಕ್ರಿಯೆಗಳ ಲಾಭವನ್ನು ಅನ್ಯಾಯವಾಗಿ ಉಪಯೋಗಿಸಿ ಸಮಾಜದ ನಾಶವನ್ನೇಗೈಯ್ಯುತ್ತಾ ಅದು ವಿಷಯ ಲಾಲಸೆಯನ್ನು ಕಡಿಮೆ ಮಾಡುವುದರ ಬದಲು ಇನ್ನೂ ವೃದ್ಧಿಗೊಳಿಸುತ್ತದೆ. ಮನುಷ್ಯ ಸೈಜ್ಯ ವಿಚಾರವನ್ನೂ ಇದು ನಿರ್ಮೂಲಗೊಳಿಸುತ್ತದೆ. ಆದ್ದರಿಂದ ಇಂತಹ ಅಸ್ತ್ರಗಳ ಉಪಯೋಗದಿಂದ ಸಂತಾನ ನಿರೋಧನವನ್ನು ಬರುಸುವುದು ಸಮಾಜಕ್ಕೆ ಹಾನಿಕರ.

ಈ ವಿಷಯದಲ್ಲಿ ನನ್ನ ಸ್ವಂತ ಅನುಭವವು ನನಗೆ ತುಂಬಾ ಸಹಾಯಕವಾಗಿದೆ ಮದುವೆಯಾದಾಗ ಬ್ರಹ್ಮಚರ್ಯವನ್ನು ಪಾಲಿಸುವುದು ಸುಲಭಸಾಧ್ಯವಾದ ಕೆಲಸವಾಗಿದೆ. ಪ್ರಾರಂಭದಲ್ಲಿ ತುಂಬಾ ಕಷ್ಟಪ್ರದವಾಗಿ ಕಂಡುಬಂದರೂ ಈಗ ವಿಷಯ ಲಾಲಸೆಯನ್ನು ಎಷ್ಟು ಸುಲಭವಿಂದ ತೃಪ್ತಿಗೊಳಿಸಬಹುದೋ ಅಷ್ಟೇ ಸುಲಭವಿಂದ ಬ್ರಹ್ಮಚರ್ಯವನ್ನು ಪಾಲಿಸಬಹುದಾಗಿದೆ. ಮದುವೆಯ ಮುಖ್ಯ ಉದ್ದೇಶವು, ಸಂತಾನದ ಅವಶ್ಯಕತೆಗಾಗಿಯೆಂದೂ, ಅದರ ಭೋಗಾಪೇಕ್ಷೆಯನ್ನು ವಿವಿಧವಾಗಿ ಮಾಡುವುದೇ ಪಾಪಕೃತ್ಯವೆಂದೂ ಯಾವಗಂಡಸು ಮತ್ತು ಹೆಂಗಸು ಎಣಿಸಿತ್ತಾರೊ ಅವರಿಗೆ ಬ್ರಹ್ಮಚರ್ಯವು ಸುಲಭ ಈ ಬ್ರಹ್ಮಚರ್ಯದಿಂದಾಗಿ ಸಂತಾನ ನಿರೋಧವು ಸುಲಭ. ಇದರ ವಿಷಯವಾಗಿಯೇ ವೈಜ್ಞಾನಿಕರೂ ಅನೇಕ ಪುಸ್ತಕಗಳಲ್ಲಿ ದೊಡ್ಡ ದೊಡ್ಡ ಲೇಖಗಳನ್ನೇ ಬರೆದಿರುತ್ತಾರೆ. ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟ ಪುರುಷರು ಬಲಶಾಲಿಗಳೂ, ಜ್ಞಾನವಂತರೂ, ಕಾರ್ಯದಕ್ಷರೂ ಆಗಿರುತ್ತಾರೆ; ಎಂದು ಅವರ ಲೇಖಗಳ ಸಾರಾಂಶ.

ಆದರೆ ಇಂತಹ ಬ್ರಹ್ಮಚಾರಿಗಳ ಸುಳಿವು ಈಗ ದೇಶದಲ್ಲಿಲ್ಲವೆಂದು ಯಾರೂ ಅನುಮಾನಪಡುವುದು ಬೇಡ. ಇಂದು ಬ್ರಹ್ಮಚಾರಿಗಳು ಅನೇಕರಿದ್ದರೂ, ಅವರು ಸಂಪೂರ್ಣ ಬ್ರಹ್ಮಚಾರಿಗಳಲ್ಲ. ಒಹಳೇ ಪ್ರಯತ್ನ ಮಾಡಿದರೂ, ಅವರಿಗೆ ಮನಸ್ಸಿನ ಹಿರಿ ಹಿಗ್ಗ್ಗಗಳನ್ನು ಗೆಲ್ಲಲಾಗಲಿಲ್ಲವೆಂದು ಖಂಡಿತ. ಆಶಾಪಾಶಗಳ ಖಂಡನೆಯನ್ನು ಅವರಿನ್ನೂ ಮಾಡಿಲ್ಲ. ಇದೆಲ್ಲವನ್ನೂ ಮನಗಂಡ ನಾವು ಬ್ರಹ್ಮಚರ್ಯವನ್ನು ಕಾಪಾಡುವುದು ಒಹಳ ಕಷ್ಟವೆಂದು ಭಾವಿಸಬಹುದು. ಆದರೆ ಅದು ಶುದ್ಧ ಶಫ್ಪು. ಸಂಪೂರ್ಣ ಬ್ರಹ್ಮಚರ್ಯವನ್ನು ಕಾಪಾಡಬೇಕಾದರೆ, ನಮ್ಮ ಆಸುಪಾಸುಗಳು, ನಾವಿರುವ ವಟಾರ, ನಾವಿರುವ ದೇಶಗಳ ಸ್ಥಿತಿಯು ಬ್ರಹ್ಮಚರ್ಯಕ್ಕೆ ಎಡೆಕೊಡುವಂತಹದ್ದಾಗಿರಬೇಕು. ಕೆಲವರು, ಬ್ರಹ್ಮಚರ್ಯದ ಅರ್ಥವನ್ನೇ ಸರಿಯಾಗಿ ಮಾಡಿಲ್ಲ. ಬ್ರಹ್ಮಚರ್ಯವೆಂದರೆ ಕೇವಲ ಜನನೇಂದ್ರಿಯ ನಿಗ್ರಹ ಎಂದೆ ಭಾವಿಸಿರುತ್ತಾರೆ. ಅದೂ ನೂಢ ಭಾವನೆ. ಬ್ರಹ್ಮಚರ್ಯವೆಂದರೆ ಎಲ್ಲಾ ಇಂದ್ರಿಯಗಳ ನಿಗ್ರಹವಲ್ಲದೆ, ಮನುಷ್ಯನನ್ನ ದುಶ್ಚಾಳಿಗಳಿಗೆ ಈತು ಮಾಡುವಂತಹ ಇತರ ಚಟಗಳಿಗೂ ಅಪ್ಪದಕೊಡದೆ ಇರುವುದು ಎಂಬರ್ಥ. ಮದುವೆಯಾದ ದಂಪತಿಗಳು ಇಂತಹ ಬ್ರಹ್ಮಚರ್ಯವನ್ನು ಪಾಲಿಸಿದ ಮೇಲೆ ಯುವಕರು ಇದನ್ನು ಬಹು ಸುಲಭವಾಗಿ ಪಾಲಿಸಬಹುದೆಂದೂ, ಭಾವಿಸಬಹುದು. ಯುವಾತನು ಬ್ರಹ್ಮಚರ್ಯವನ್ನು ಪಾಲಿಸಲು ಶಕ್ತನಾಗಿರುವನೋ ಅವನು ಜೀವದ ವಿಜ್ಞಾನವನ್ನು ಅರಿತವನೆಂದು ಖಂಡಿತವಾಗಿ ಹೇಳಬಹುದು

'ಸ್ವ. ಅ.'

ಕೊಡಗು

ವಾರ್ತಿಕ ತಾ ೧೭ನೇ ಶುಕ್ರವಾರ ೧೯೩೬.

ಕಾಂಗ್ರೆಸ್ ಮಹಾ ಸಭೆ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ 49ನೇ ವಾರ್ಷಿಕ ಮಹಾ ಸಭೆಯು ಈ ತಾ. 12, 13 ಮತ್ತು 14ರ ರಾತ್ರಿಗಳಲ್ಲಿ ಲಕ್ನೋದಲ್ಲಿ ನಡೆಯಿತು. ಏನಿತ್ತು ಸಾವಿರ ಜನರು ನೆರೆಯುವಷ್ಟು ಸ್ಥಳದ ಏರ್ಪಾಡು ಮಾಡಿದ್ದರೂ ಕೂಡ ಪ್ರತಿನಿಧಿಗಳ ಸಂಖ್ಯೆಯು 850ನ್ನು ಏರಿರಲಿಲ್ಲ. ಉಳಿದವರು ಪ್ರೇಕ್ಷಕರೂ, ಸ್ವಾಗತ ಕಮಿಟಿಯ ಮೆಂಬರುಗಳೂ ಆಗಿದ್ದರು. ಕಾಂಗ್ರೆಸಿನ 500 ಸದಸ್ಯರುಗಳಿಗೊಬ್ಬನಂತೆ ಮಾತ್ರ ಪ್ರತಿನಿಧಿಯು ಮಹಾ ಸಭೆಗೆ ಬರಬಹುದೆಂಬ ನಿರ್ಣಯವು ಕಳೆದ ಬೊಂಬಾಯಿ ಕಾಂಗ್ರೆಸಿನಲ್ಲಿ ಪಾಸಾದುದರಿಂದ ಈಸಾರಿ ಮೊದಲಿನಂತೆ ಪ್ರತಿನಿಧಿಗಳ ಸಂಖ್ಯೆಯು ಸಾವಿರಗಟ್ಟಿ ಇಲ್ಲದೆ ಈ ಚಿಕ್ಕ ಸಂಖ್ಯೆಗೆ ಇಳಿದದ್ದಾಗಿದೆ. ಪ್ರತಿನಿಧಿಗಳ ಸಂಖ್ಯೆಯು ಕಡಿಮೆಯಾದಾಗ್ಯೂ ಈ ಮಹಾ ಸಭೆಯ ಪ್ರಾಮುಖ್ಯತೆಯೇನೂ ಕಡಿಮೆಯಾಗಲಿಲ್ಲ; ಬದಲು ಈ ಸಾರಿಯ ಸಮ್ಮೇಳನವು ಬಹು ಮಹತ್ವದೆಂದೇ ಹೇಳಬೇಕಾಗಿದೆ. ಹೊಸ ರಾಜ್ಯಾಂಗ ರಚನೆಯು ಜಾರಿಗೆ ಬರುವ ಮುಂಚೆ ಅದರ ಕಡೆಗೆ ಏಕಪ್ರಕಾರವಾದ ರಾಷ್ಟ್ರೀಯ ಮಹಾ ಸಭೆಯ ವರ್ತನೆ ಹೇಗಿರಬೇಕೆಂಬುದನ್ನು ನಿರ್ಧರಿಸಿದುದರಿಂ, ಬಿಕ್ಕಟ್ಟಿನ ಸಮಯದಲ್ಲಿ ಪಂಡಿತ ಜವಾಹರಲಾಲರಂಥ ಅದ್ವಿತೀಯ ಯುವಕ ಧುರೀಣರು ಅಧ್ಯಕ್ಷರಾಗಿದ್ದದ್ದೂ ಈ ಮಹತ್ವಕ್ಕೆ ಕಾರಣವಾಗಿದೆ.

ಪಂಡಿತ ಜವಾಹರಲಾಲರು, ಗುಲಾಮಗಿರಿಯ ಬಂಡೆಯಲ್ಲಡಿಯಲ್ಲಿ ಸಿಕ್ಕಿ ನರಳುತ್ತಾ ಇರುವ ವಿಲ್ಲಿಯ ಗಟ್ಟಿಯುವಕರ ಹೃದಯಗಳಿಂದ ಉಕ್ಕಿ ಬರುತ್ತಿರುವ ಸ್ವಾತಂತ್ರ್ಯ ಕಾಂಕ್ಷೆಯ ಮೂರ್ತಿಗಳಂತಿರುವರು. ಮಹಾತ್ಮ ಗಾಂಧಿಯವರು ಹೇಗೆ ಭಾರತೀಯರೆಲ್ಲರ ಪ್ರೇಮವನ್ನು ಸಂಪಾದಿಸಿರುವರೋ ಹಾಗೆಯೇ ಜವಾಹರಲಾಲರು ಯುವಕ ಸಮುದಾಯದ ವಿಶ್ವಾಸವನ್ನು ಪಡೆದಿರುವರು. ಸಂಪೂರ್ಣ ಸ್ವಾತಂತ್ರ್ಯವೇ ಈ ಧುರೀಣರಿಬ್ಬರ ಗುರಿಯಾಗಿದೆ. ಆದರೆ ಈ ಉದ್ದೇಶವನ್ನು ನೆರವೇರಿಸಲು ಮಹಾತ್ಮರ ಅಹಿಂಸಾ ರೀತಿಯ ತ್ಯಾಗದಾರಿಯು ಸಾಲದಕಾಶವಾದುದೆಂದು ಭಾವಿಸಿ ಹಲವು ಉತ್ಸಾಹಿಗಳು ಶೀಘ್ರದ ಹಾದಿಯನ್ನು ತೋರಿಸುವರೆಂದು ಪಂಡಿತರನ್ನು ನೋಡುತ್ತಿದ್ದಾರೆ. ಆದುದರಿಂದ ಇಂದಿನ ದಿನ ಮಹಾತ್ಮರನ್ನು ಹಿಡಿದು ಭಾರತೀಯರನ್ನು ಸ್ವಾತಂತ್ರ್ಯಹೋರಾಟದಲ್ಲಿ ನಡೆಸಬಲ್ಲ ಧುರೀಣರೆಂದರೆ ಪಂ. ಜವಾಹರಲಾಲರೇ ಸಂ. ಆ ಕಾರಣದಿಂದಲೇ ಅವರು ಈ ಮಹಾ ಸಭೆಯ ಅಧ್ಯಕ್ಷರಾಗಿ ಸರ್ವಸಮ್ಮತದಿಂದ ಆರಿಸಲ್ಪಟ್ಟದ್ದಾಗಿದೆ.

ಅಧ್ಯಕ್ಷರ ಭಾಷಣವು ಹಿಂದೀಯರಲ್ಲಿ ನವಚೈತನ್ಯವನ್ನುಂಟು ಮಾಡುವಂಥಾದ್ದಾಗಿದೆ ಪಂಡಿತರು ತನ್ನ ಹೃದಯದಲ್ಲಿ ಕುದಿಯುತ್ತಿದ್ದುದನ್ನೆಲ್ಲಾ ಒಂದಿಷ್ಟೂ ಮುಚ್ಚುಮರೆ ಇಲ್ಲದೆ, ಹೆದರದೆ ಸ್ಪಷ್ಟವಾಗಿ ರಾಷ್ಟ್ರದ ಮುಂದಿಟ್ಟರು ತ್ಯಾರೆ ತನ್ನ ಅಭಿಪ್ರಾಯಗಳು ಕಾಂಗ್ರೆಸು ವರ್ಕಿಂಗ್ ಕಮಿಟಿಯವರಿಗೂ, ಹಳಬ ಮುಂದಾಳುಗಳಿಗೂ ಒಪ್ಪದೆ ಹೋದರೂ ಕೂಡ ಅವರು ಅವುಗಳನ್ನು ಸಂಕೋಚವಿಲ್ಲದೆ ಬಹಿರಂಗಪಡಿಸಿರುವರು. ಹಿಂದೂದೇಶದ ಸ್ವಾತಂತ್ರ್ಯ ಸಾಧನೆಗೆ ಸಾಮ್ಯವಾದವೇ ಸುಲಭ ಉಪಾಯವೆಂದೂ, ಶಾಂತಿಮಯ ಕ್ರಾಂತಿಯನ್ನು ಹೊರದಿದ ವಿನಹ ಗತ್ಯಂತರವಿಲ್ಲವೆಂದೂ ವಿಷದವಾಗಿ ಹೇಳಿರುವರು. ಸರ್ಕಾರದ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸಿ ಹೊಸ ಅಡಳಿತ ರಚನೆಯನ್ನು ಸಂಪೂರ್ಣ ತಿರಸ್ಕರಿಸಬೇಕೆಂದು ಅಂದಿರುವರು. ಹೊಸ ನ್ಯಾಯವಿಧಾಯಕ ಸಭೆಗಳೊಳಗೆ ನುಗ್ಗಬಹುದಾದರೂ ಅಧಿಕಾರ ಸ್ವೀಕಾರ ಮಾಡಕೂಡದೆಂದು ಸೂಚಿಸಿರುವರು. ಈ ವಿಚಾರದಲ್ಲಿ ಕಾಂಗ್ರೆಸಿನೊಳಗೆ ಪಾರ್ಟಿ ಗಳಂಟಾಗಿ ಒಗ್ಗಟ್ಟು ಒಡೆದು ಹೋಗುವದೆಂಬ ಭೀತಿಯು ಹಲವರಿಗಿತ್ತು. ಈ ಅಪಾಯವನ್ನು ಪಂಡಿತರು ಜೆನ್ನಾಗಿ ಅರಿತವರಾಗಿ ತನ್ನ ವಯಕ್ತಿಕ ಅಭಿಪ್ರಾಯವು ಹೇಗೇ ಇದ್ದರೂ, ಸಂಪೂರ್ಣ ಸ್ವಾತಂತ್ರ್ಯಕ್ಕೆ ಹೋರಾಡುವವರೊಂದಿಗೆ ದೇಶದ ಕಲ್ಯಾಣಕ್ಕಾಗಿ ಸಹಕರಿಸಿ ಕೆಲಸ ಮಾಡಲು ಸಿದ್ಧನಿರುವೆನೆಂದು ಸೂಚಿಸಿರುವರು. ಈ ವರ್ತನೆಯಿಂದ ಇವರು ಕಾಂಗ್ರೆಸಿನ ಒಗ್ಗಟ್ಟನ್ನು ಕಾಪಾಡಿದರೆಂಬುದರಲ್ಲಿ ಸಂಶಯವಿಲ್ಲ. ಇದರಿಂದ ಇವರ ತ್ಯಾಗ ಬುದ್ಧಿಯೂ, ರಾಜಕೀಯ ಕುಶಲತೆಯೂ ವಿಷದವಾಗುತ್ತದೆ. ದೇಶದವರು ಇವರ ಮೇಲೆ ಇಟ್ಟ ವಿಶ್ವಾಸವನ್ನು ಇವರು ನ್ಯಾಯವಾದದೆಂದು ದೃಢೀಕರಿಸಿರುವರು.

ಈ ಮಹಾ ಸಭೆಯಲ್ಲಿ ತೀರ್ಮಾನಿಸಲ್ಪಟ್ಟ ವಿಷಯಗಳಲ್ಲಿ ಅಧಿಕಾರ ಸ್ವೀಕಾರವನ್ನು ಕುರಿತ ವಿಚಾರವೇ ಪ್ರಾಮುಖ್ಯವಾದುದು. ಈ ಸಂಗತಿಯು ದೀರ್ಘ ಕಾಲದಿಂದ ದೇಶೀಯರಿಂದ ಚರ್ಚಿಸಲ್ಪಡುತ್ತಿದೆ. ಮಂತ್ರಿ ಪದವಿ ಸ್ವೀಕಾರ ಮಾಡಬಾರದೆಂಬ ಸಮಿತಿವಾದಿಗಳ ಅಭಿಪ್ರಾಯಕ್ಕೆ ಅಧ್ಯಕ್ಷರು ಬೆಂಬಲವನ್ನಿತ್ತರು. 'ಮಂತ್ರಿ ಪದವಿಗಳನ್ನು ಒಪ್ಪಿಕೊಂಡರೆ ಸರ್ಕಾರದೊಂದಿಗೆ ಸಹಕರಿಸಿದಂತಾಗುತ್ತದೆ; ಹೊಸ ರಾಜ್ಯ ರಚನೆಯನ್ನು ಸ್ವೀಕರಿಸಿದಂತಾಗುತ್ತದೆ; ಕಾಂಗ್ರೆಸಿನವರಲ್ಲಿ ತಿಸ್ಕೃ ಕೆಟ್ಟು ಹೋಗಿ, ಬಲವು ಕಡಿಮೆಯಾಗುವುದು' ಎಂದು ಮುಂತಾಗಿ ಅವರ ವಾದವಾಗಿದೆ. 'ನವ ಶಾಸನ ಸಭೆಯ ಪ್ರವೇಶ ಮಾಡಲು ತೀರ್ಮಾನಿಸಿದ ಮೇಲೆ ಅಧಿಕಾರ ಸ್ವೀಕಾರ ಮಾಡುವುದು ಉತ್ತಮ; ಹಾಗೆ ಮಾಡದಿರುವುದರಿಂದ ದೇಶ ದ್ರೋಹಿಗಳು ಸ್ವಾರ್ಥತೆಗಾಗಿ ಆ ಪದವಿಗಳನ್ನು ಉಪಯೋಗಿಸುವದನ್ನು ತಡೆದಂತಾಗುವುದು; ದೇಶಹಿತ ಕಾರ್ಯಗಳಿಗೆ ಹೊಸ ರಚನೆಯು ಹೇಗೆ ಅಡ್ಡಿಯಾಗುವದೆಂಬುದನ್ನು ವಿಷದಪಡಿಸಿದಂತಾಗುವುದು.' ಎಂದು ಅಧಿಕಾರ ಸ್ವೀಕಾರ ಮಾಡಬೇಕೆನ್ನುವ ಪಾರ್ಟಿಯವರು ವಾದಿಸಿದರು. ಅಧಿಕಾರ ಸ್ವೀಕಾರದ ವಿಷಯವು ಅಷ್ಟು ಮಹತ್ವದಲ್ಲ; ಅದಕ್ಕೆ ಕೆಲವರು ಅನಾವಶ್ಯವಾಗಿ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಆ ಪ್ರಶ್ನೆಯನ್ನು ತೀರ್ಮಾನಿಸುವ ಕಾಲ ಬಂದಿಲ್ಲ. ಬರುವ ಜುನಾವಣೆಯ ವರೆಗೆ ಯಾವ ಬದಲಾವಣೆಗಳಾಗುವವೆಂದು ಈಗ ಹೇಳಲಿಕ್ಕಾಗುವದಿಲ್ಲ. ತಕ್ಕ ಸಮಯ ಬಂದಾಗ್ಯೇ ಅದನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸಬಹುದು ಎಂದು ವರ್ಕಿಂಗ್ ಕಮಿಟಿಯವರ ಠರಾವಾಗಿತ್ತು. ಈ ತರಾವೇ ದೊಡ್ಡ ಬಹುಮತದಿಂದ ಪಾಸಾಯಿತು.

ಕಾಂಗ್ರೆಸಿನವರು ಕೌನ್ಸಿಲ್ ಸಭೆಗಳಲ್ಲಿ ಪ್ರವೇಶ ಮಾಡಬೇಕೆಂದು ತೀರ್ಮಾನಿಸಿರುವರು. ದೇಶೀಯರ ಬೆಂಬಲದಿಂದ ಕಾಂಗ್ರೆಸಿನವರು ಕೌನ್ಸಿಲುಗಳಲ್ಲಿ ಬಹುಮತ ಉಳ್ಳವರಾದೇನೇ ಅಧಿಕಾರ ಸ್ವೀಕಾರದ ಪ್ರಶ್ನೆ ಹುಟ್ಟುವುದು. ಈ ಮಧ್ಯೆ ರಾಜಕೀಯ ವಾತಾವರಣವು ಯಾವ ತರಹದ ಬದಲಾವಣೆಯನ್ನು ಹೊಂದುವದೆಂದು ತಿಳಿಯಲಾಗುವದಿಲ್ಲ. ಇಡೀ ಪ್ರಪಂಚದಲ್ಲೇ ಗೊಂದಲವೇಳುವ ಚಿನ್ಹೆಗಳಿವೆ, ಯುದ್ಧದ ವೋಡಗಳು ಓಡ್ಯಾಡುತ್ತಿವೆ. ಆದುದರಿಂದ ಈಗ ಅಗತ್ಯವಿಲ್ಲದ ಪ್ರಶ್ನೆಯ ತೀರ್ಮಾನದ ಪ್ರಸಂಗದಲ್ಲಿ ಒಗ್ಗಟ್ಟನ್ನು ಕೆಡಿಸಿಕೊಳ್ಳುವದು ಉಚಿತವಲ್ಲ. ಹೇಗೂ ಕಾಂಗ್ರೆಸು ಮಹಾ ಸಭೆಯೊಂದೇ ಭಾರತ ಭೂಮಿಯ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸುತ್ತಿರುವ ಸಂಸ್ಥೆಯಾಗಿರುವದರಿಂದ ಈ ಸಭೆಯ ತೀರ್ಮಾನಗಳನ್ನು ಶಿರಸಾವಹಿಸಿ ಅವುಗಳನ್ನು ಜಾರಿಗೆ ತರಲು ಪ್ರಯತ್ನಿಸಬೇಕಾದದ್ದು ಪ್ರತಿಯೊಬ್ಬ ದೇಶೀಯನ ಪರಮ ಕರ್ತವ್ಯವಾಗಿದೆ.

ಕಾಂಗ್ರೆಸ್ ದಿನಾಚರಣೆ.

—೦೦೦—

ಈ ಸಾರಿ ಲಕ್ನೋ ಕಾಂಗ್ರೆಸಿನ ಅಧಿವೇಶನವು ತಾತ್ಕಾಲಿಕವಾದ ಕೊನೆಯ ಎರಡು ದಿವಸಗಳಲ್ಲಿ ನೆರೆಯುವುದರಿಂದ ಈ ತಾ. 12ನೇ ದಿನವನ್ನು ಕಾಂಗ್ರೆಸ್ ದಿನವಾಗಿ ಆಚರಿಸಬೇಕೆಂದು ಕರ್ನಾಟಕ ಕಾಂಗ್ರೆಸು ಕಮಿಟಿಯವರು ನಿಶ್ಚಯಿಸಿದ್ದಂತೆ ಕೊಡಗಿನಲ್ಲಿ ಈ ದಿನವು ಆಚರಿಸಲ್ಪಟ್ಟಿತು. ಗೋಣಿಕೊಪ್ಪಲಲ್ಲಿ ಮಧ್ಯಾಹ್ನ 2 ಗಂಟೆಗೆ ರಾಷ್ಟ್ರ ಧ್ವಜ ಮತ್ತು ರಾಷ್ಟ್ರ ಗೀತೆಗಳ ಸಮೇತ ಒಂದು ಮೆರವಣಿಗೆ ಹೊರಟು ಪಟ್ಟಣದ ಮುಖ್ಯ ಬೀದಿಗಳಿಗಾಗಿ ಬಂದು ಅಸ್ಪತ್ರೆ ಬಳಿ ವೈಶಾಲದಲ್ಲಿ ಜನರು ಸೇರಿದರು. ಅಲ್ಲಿ ಸಜ್ಜುಗೊಳಿಸಿದ್ದ ಧ್ವಜ ಸ್ತಂಭದಬಳಿ ನಿಂತುಕೊಂಡು ಮೆ. ಪಿ ಐ ಬೆಳ್ಯಪ್ಪನವರು ರಾಷ್ಟ್ರ ಧ್ವಜದ ಮಹತ್ವವನ್ನು ವಿವರಿಸಿ ಹೇಳಿದರು. ನಂತರ 'ವಂದೇ ಮಾತರಂ' ಮತ್ತು ಧ್ವಜ ಗೀತೆಯನ್ನು ಹಾಡಿ ಧ್ವಜಾರೋಹಣವೂ ಧ್ವಜಾಭಿವಂದನೆಯೂ ಮಾಡಲ್ಪಟ್ಟಿತು.

ಆ ಮೇಲೆ ಮೆ. ಅಜ್ಜಿಕುಟ್ಟಿರ ಚಿಣ್ಣಪ್ಪನವರ ಸೂಚನೆ ಮೇರೆ ಮೆ. ಪಿ ಐ ಬೆಳ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು, ಕಾಂಗ್ರೆಸು ಸಂಸ್ಥೆಯು ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಮಾಡುತ್ತಿರುವ ಪ್ರಯತ್ನಗಳು ಮತ್ತು ಈ ದಿನ ಲಕ್ನೋದಲ್ಲಿ ನೆರೆಯುವ ಕಾಂಗ್ರೆಸು ಮಹಾ ಸಭೆಯು ಮಹತ್ವ ಮೊದಲಾದುವುಗಳನ್ನು ಕುರಿತು ಭಾಷಣ ಮಾಡಿ, ಈ ಕೆಳಗಿನ ತೀರಾವನ್ನು ಸಭೆಯ ಮುಂದಿಟ್ಟರು.

"ಇಂಡಿಯನ್ ನೇಶನಲ್ ಕಾಂಗ್ರೆಸು ಭಾರತ ಭೂಮಿಯ ಸ್ವಾತಂತ್ರ್ಯಕ್ಕಾಗಿ ಮಾಡುವ ಎಲ್ಲಾ ಹೋರಾಟಗಳಿಗೂ ಈ ಸಭೆಯವರು ತನ್ನ ಸಂಪೂರ್ಣ ಬೆಂಬಲವನ್ನೀಯುತ್ತಾರೆ."

ಮೆ. ಕೊಡಂದೇರ ಚಂಗಪ್ಪನವರಿಂದ ಅನುಮೋದಿಸಲ್ಪಟ್ಟ ಈ ತರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಕೊಡಗು ಕಾಂಗ್ರೆಸು ಕಮಿಟಿಯ ಗೌರವ ಕಾರ್ಯದರ್ಶಿಯವರಾದ ಮೆ. ಸಿ. ಎಂ. ಪೂಣಚ್ಚನವರು ಶ್ರೀ ಸುಬಾಷ್‌ಚಂದ್ರ ಬೋಸರವರ ಜೀವನಚರಿತ್ರೆ, ಅವರ ಈಗಿನ ದಸ್ತಗಿರಿ ಮೊದಲಾದ ವಿಷಯಗಳನ್ನು ಕುರಿತು ಭಾಷಣ ಮಾಡಿ ಈ ಕೆಳಗಿನ ಗೊತ್ತುವಳಿಯನ್ನು ಸೂಚಿಸಿದರು.

"ಶ್ರೀ ಸುಬಾಷ್‌ಚಂದ್ರ ಬೋಸರವರನ್ನು ಅಕಾರಣವಾಗಿಯೂ, ಅನ್ಯಾಯವಾಗಿಯೂ ದಸ್ತಗಿರಿಮಾಡಿ, ಅವರನ್ನು ವಿಚಾರವೇನೂ ಇಲ್ಲದೆ ಜೈಲಿನಲ್ಲಿ ಬಂಧಿಸಿರುವುದನ್ನು ಈ ಸಭೆಯು ಸಂಪೂರ್ಣ ಖಂಡಿಸುತ್ತದೆ."

ಈ ಗೊತ್ತುವಳಿಯು ಮೆ. ಎ ಎಸ್. ಚಿಣ್ಣಪ್ಪನವರಿಂದ ಅನುಮೋದಿಸಲ್ಪಟ್ಟು ಏಕಮತದಿಂದ ಮಂಜೂರಾಯಿತು. ರಾಷ್ಟ್ರಗೀತೆ ಹಾಡಿ ಧ್ವಜವು ಕೆಳಗಿಳಿಸಲ್ಪಟ್ಟಿತು. ಅಧ್ಯಕ್ಷರಿಗೆ ವಂದನೆಗಳಿಂದ ಏಟಿಂಗು ಅಂತ್ಯವಾಯಿತು.

ಜವಾನ್ದಾರರ ಸಂಘದ ವಾರ್ಷಿಕ ಮಹಾ ಸಭೆಯ ಸ್ವಾಗತ ಏರ್ಪಾಡು.

—೦೦೦—

ಕೊಡಗು ಜವಾನ್ದಾರರ ಸಂಘದ ವಾರ್ಷಿಕ ಮಹಾ ಸಭೆಯನ್ನು ಈ ವರ್ಷ ವೀರಾಜಪೇಟೆಯಲ್ಲಿ ಬರುವ ವೇ೯ ಕಾರ್ತೀಕು 14ರಿಂದ 15ರೊಳಗೆ ನಡಿಸುವಂತೆ ಆ ಸಂಘದ ಕಾರ್ಯಕಾರಿ ಮಂಡಳಿಯವರು ನಿಶ್ಚಯಿಸಿರುವುದು ಸರಿಯಷ್ಟೆ. ಈ ಮಹಾ ಸಭೆಯ ಸ್ವಾಗತ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಒಂದು ಸ್ವಾಗತ ಕಮಿಟಿಯನ್ನು ಆರಿಸುವುದಕ್ಕೆ ಸಂಘದ ಜನರಲ್ ಸೆಕ್ರೆಟರಿಯವರ ಕೋರಿಕೆ ಮೇರೆ ಈ ತಾ. 15ರಲ್ಲಿ ವೀರಾಜಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತು. ಮೆ. ರಾ ಪಟ್ಟಸಂಡ ಬೆಳ್ಯಪ್ಪನವರು ಏಟಿಂಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಜವಾನ್ದಾರರ ಸಂಘದ ಪೈಸಿಡೆಂಟರು ಏಟಿಂಗಿನ ಉದ್ದಿಶ್ಯವನ್ನು ಕೂಲಂಕಷ, ವಿವರಿಸಿ, ಪಂಡಿತ ಮದನಮೋಹನ ಮಾಳವೀಯರಂತಹ ಅಖಿಲ ಭಾರತ ಧುರೀಣರನ್ನು ಸಂಘದ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿ ಕರೆಸಲು ನಿಶ್ಚಯಿಸಿರುವುದರಿಂದ ಅವರಿಗೆ ಯೋಗ್ಯವಾದ ಸ್ವಾಗತವನ್ನೀಡಲಿಕ್ಕೂ, ಮಹಾ ಸಭೆಯ ಕಾರ್ಯ ಕಲಾಪಗಳನ್ನು ಸಾಂಗವಾಗಿ ನಡಿಸಲು ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕೂ ಮುಂಜಾಗ್ರತೆಯಿಂದ ಕೆಲಸ ಮಾಡುವವರನ್ನು ಸ್ವಾಗತ ಕಮಿಟಿಗೆ ಮೆಂಬರುಗಳಾಗಿ ಆರಿಸಬೇಕೆಂದು ಸಭೆಯವರನ್ನು ಕೇಳಿಕೊಂಡರು. ಕೂಡಲೆ ಕೆಲವು ಮಹನೀಯರು ಸ್ವಾಗತ ಕಮಿಟಿಯಲ್ಲಿ ಕೆಲಸ ಮಾಡಲು ತಯಾರಾಗಿರುವೆವೆಂದು ತಾವಾಗಿ ಹೇಳಿದರು. ನಂತರ ಉಳಿದ ಗ್ರಾಮಗಳಿಂದಲೂ ಮೆಂಬರುಗಳು ಆರಿಸಲ್ಪಟ್ಟರು. ಯೆಡೆನಾಲ್ಕುನಾಡು ಮತ್ತು ಬೆಪ್ಪುನಾಡುಗಳ ಪ್ರತಿಯೊಂದು ಗ್ರಾಮದಿಂದಲೂ ಮೆಂಬರುಗಳು ಚುನಾಯಿಸಲ್ಪಟ್ಟರು. ಈ ಕಮಿಟಿಗೆ ಹೆಚ್ಚಿನ ಮೆಂಬರುಗಳನ್ನು ಸೇರಿಸಿಕೊಳ್ಳುವ ಮತ್ತು ಅತಂ ಅಧ್ಯಕ್ಷರು, ಕಾರ್ಯದರ್ಶಿ, ಖಜಾನ್ದಿ ಮೊದಲಾದ ಉದ್ಯೋಗಸ್ಥರನ್ನು ಆರಿಸಿಕೊಳ್ಳುವ ಅಧಿಕಾರವು ಈ ಕಮಿಟಿಗೆ ಕೊಡಲಾಯಿತು. ಈ ಕೆಲಸಗಳನ್ನು ನಡಿಸಲು ಸ್ವಾಗತ ಕಮಿಟಿಯು ಪ್ರಥಮ ಏಟಿಂಗು ಈ ತಾರೀಕು 22ನೇ ಬುಧವಾರ ವೀರಾಜಪೇಟೆಯಲ್ಲಿ ನಡಿಸುವಂತೆ ತೀರ್ಮಾನಿಸಲಾಯಿತು.

ಪಿ. ಬೆಳ್ಯಪ್ಪ,
(ಅಧ್ಯಕ್ಷರು)

ನೋಟೀಸು.

—೦೦೦—

ಕೊಡಗು ಜವಾನ್ದಾರರ ಸಂಘದ ಈ ವರ್ಷದ ವಾರ್ಷಿಕ ಸಭೆಯ ಸ್ವಾಗತ ಏರ್ಪಾಡಿನ ಬಗ್ಗೆ ಆರಿಸಲ್ಪಟ್ಟಿರುವ ಸ್ವಾಗತ ಕಮಿಟಿಯ ಏಟಿಂಗು ಈ ತಾ. 22ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆಯ ಸ್ವದೇಶಿ ಸ್ಟೋರಿನ ಒಳ ನಡೆಯುವುದು. ಸ್ವಾಗತ ಕಮಿಟಿಯ ಮೆಂಬರುಗಳೆಲ್ಲರೂ ಏಟಿಂಗಿಗೆ ತಪ್ಪದೆ ಬರಬೇಕಾಗಿ ಕೋರಿಕೆ.

ಐ ಪಿ. ಕಾಯಪ್ಪ,
(ಜನರಲ್ ಸೆಕ್ರೆಟರಿ)

ತಾ. 17—4—1936.

ವರ್ತಮಾನ ಸಂಗ್ರಹ.

ಜಿಲ್ಲಾದೇಶ.

ಮಂಗಳೂರಿನಲ್ಲಿ ಈಗ 'ಚೆರಿ' ಕಾಫಿಯ ಕೃಯವು ಖಾಡಿಗೆ ರೂ. 135 ರಿಂದ 146ಕ್ಕೆ ಏರಿದೆಯೆಂದು ತಿಳಿಯಬರುತ್ತದೆ.

ಈ ವರ್ಷ ಪೊನ್ನಂಪೇಟೆಯ ಶ್ರೀ ಕಾವೇರಿದಾತ್ರಮದಲ್ಲಿನ ಉತ್ಸವವು ಮೇ ತಿಂಗಳು 9ನೇ ಶನಿವಾರ ಬರಗೂವದೆಂದು ತಿಳಿಯಬಂದಿದೆ.

ಮಡಿಕೇರಿ ಕಾಸ್ಮೋಪಾಲಿಟನ್ ಕ್ಲಬ್ಬಿನ ಬ್ರಿಡ್ಜ್ ಟೂರ್ನಮೆಂಟು ಈ ತಿಂಗಳು 20ನೆಲ್ಲಿ ಪ್ರಾರಂಭವಾಗುವದೆಂದು ತಿಳಿಯಬಂದಿದೆ.

ಮಡಿಕೇರಿಯ 1926ನೇ ಕ್ಲಬ್ಬಿನ ಆಶ್ರಯದಲ್ಲಿ ನಡೆಯುವ ಅಖಿಲ ಭಾರತ ಟೆನ್ನಿಸ್ ಟೂರ್ನಮೆಂಟು ಈ ತಿಂಗಳು 17 ರಲ್ಲಿ ಪ್ರಾರಂಭವಾಗಿದೆ.

ಕಳೆದ ವಾರ ಮಡಿಕೇರಿ ಮಹದೇವಪೇಟೆಯಲ್ಲಿ ಒಬ್ಬರು ಪ್ಲೇಗಿನಿಂದ ಮೃತರಾದರೆಂದೂ, ಬಾಣೆವೆಟ್ಟಿಯಲ್ಲಿ ಪ್ಲೇಗು ಇಲಿಗಳು ಸತ್ತವೆಂದೂ ವರ್ತಮಾನ

ಚೀಫ್ ಕಮಿಷನರವರು ಈ ತಿಂಗಳು 16ನೆಲ್ಲಿ ಮಡಿಕೇರಿಗೆ ಬಂದಿರುವರು; ಇವರು ತಾ. 27ರಲ್ಲಿ ಬೆಂಗಳೂರಿಗೆ ವಾಪಸು ಹೋಗುವರೆಂದು ತಿಳಿಯುತ್ತೇವೆ.

ಪಾಡಿನಾಲ್ಕುನಾಡು ತಾಲೂಕಿನ ಪನಗಳ, ಕೈಗಾರಿಕೆ ಕೆಲಸಗಳ, ತಾಲೂಕಾರಿ ಎಂಜಿನೀರಿಂಗ ಪ್ರದರ್ಶನವು ಈ ತಿಂ 20 ನೆ ತ್ತು 21ನೆಲ್ಲಿ ಎಮ್ಮೆಗುಂಡಿಯಲ್ಲಿ ನಡೆಯುವುದು

ಕೊಡಗಿನ ಹರಿಜನ ಮಹಾ ಸಭೆಯು ಈ ತಿಂಗಳು 20ನೇ ಸೋಮವಾರ ಹಾತೂರು ಶಾಲೆಯ ಒಳ ಮೈದಾನದಲ್ಲಿ ಸೇರುವದೆಂದು ತಿಳಿಯಬರುತ್ತದೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಿಂಗಳು 25—4—36ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತದೆ.

ವಿದ್ಯಾ ಇಲಾಖೆಯವರ ಸ್ಕೌಟ್ ಟ್ರೈನಿಂಗ್ ಕಾರ್ಯವು ಈ ತಿಂ 17ನೆ ರಂತ್ರಿಯಿಂದ ಒಂದುವಾರದ ವರೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯುವುದು.

ಹುದಿಕೇರಿ ಒಳಿ ಟೀ ತೋಟದಲ್ಲಿ ಡಾಕ್ಟರಾಗಿದ್ದ ಮೆ. ಬಿಟ್ಟಿಯಂಡ ಕಾರ್ಯಪ್ಪನವರು ಈ ತಿಂಗಳು 10ರ ರಾತ್ರಿ ವಿರಾಜಪೇಟೆ ಆಸ್ಪತ್ರೆಯಲ್ಲಿ ಶಿವಾಧೀನರಾದರೆಂದು ತಿಳಿದು ವಿಷಾದಿಸುತ್ತೇವೆ.

ವೀರಾಜಪೇಟೆಯಲ್ಲಿ ದರ್ಜಿ ಕೆಲಸ ಮಾಡುತ್ತಿದ್ದ ಒಬ್ಬ ಮುಸಲ್ಮಾನರವನು ಈ ತಿಂಗಳು 14 ರಲ್ಲಿ ಕೊಡಂಗೇರಿ ಒಳಿ ಕಾವೇರಿ ನದಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡನೆಂದು ವರ್ತಮಾನ.

ಬೇಸಿಗೆ ಕಾಲದ ರಜೆಗಾಗಿ ವೀರಾಜಪೇಟೆ ಹೈಸ್ಕೂಲು ಈ ತಿ 13ರಿಂದ ಮೇ ತಿಂ. 25ರ ವರೆಗೂ, ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಈ ತಿಂ. 20ರಿಂದ ಜೂನ್ ತಿಂ. 1ರ ವರೆಗೂ ಮುಚ್ಚಲ್ಪಟ್ಟಿವೆ.

ದಕ್ಷಿಣ ಕೊಡಗು ಪೊನ್ನಪ್ಪ ಸಂತೆಯಲ್ಲಿನ ದನಗಳ, ತಾಲೂಕಾರಿಗಳ, ಹೆಣ್ಣಿಗೆ ಕೆಲಸದ, ಕೋಳಿಗಳ ಮತ್ತು ಇತರ ಕೈಗಾರಿಕೆಗಳ ಪ್ರದರ್ಶನವು ಈ ತಿಂ. 30 ರಿಂದ ಮೇ ತಿಂ. 2 ರ ವರೆಗೆ ನಡೆಯುವುದಾಗಿ ತಿಳಿಯುತ್ತೇವೆ.

ಕಳೆದ 4½ ತಿಂಗಳು ರಜೆಯಲ್ಲಿದ್ದ ಮಡಿಕೇರಿ ಟೌನ್ ಇನ್ಸ್‌ಪೆಕ್ಟರ್ ಮೆ. ಕೋದಂಡ ಮುದ್ದಪ್ಪನವರು ಹುಗಾಮಿ ಸಬ್ ಇನ್ಸ್‌ಪೆಕ್ಟರಾಗಿದ್ದ ಮೆ. ಅಜ್ಜಿರಂಡ ಬೊಳ್ಳಪ್ಪನವರಿಂದ ಈ ತಿಂ. 16ನೆಲ್ಲಿ ಚಾರ್ಜು ವಹಿಸಿಕೊಂಡರು.

ನಾಪೋಕ್ಲು ಜ್ಯುಬಿಲಿ ಕ್ಲಬ್ಬಿನ ಆಶ್ರಯದಲ್ಲಿ ಬ್ಯಾಡ್ಮಿಂಟನ್ ಟೂರ್ನಮೆಂಟು ಕಳೆದ ವಾರ ನಡೆದು ಗೆದ್ದವರಿಗೆ ಡಿಸ್ಟ್ರಿಕ್ಟ್ ಪೊಲೀಸು ಸುಪರಿಂಟೆಂಡೆಂಟರಾದ ಮೆ. ಬಿಟ್ಟಿಯಂಡ ಕುಟ್ಟಪ್ಪನವರು ಇನಾಮಿನ ಬಟ್ಟಲ್ಲನ್ನು ಕೊಟ್ಟರೆಂದು ತಿಳಿಯಬರುತ್ತದೆ.

ಕೊಡಗು ಪೊಲೀಸು ಇಲಾಖೆಯ ಇನ್‌ಸ್ಪೆಕ್ಷನ್ ಬಗ್ಗೆ ಬೆಂಗಳೂರು ಕಂಟೋನ್ ಮೆಂಟಿನ ಪೊಲೀಸು ಕಮಿಷನರು ಈ ತಿಂ. 21ರಲ್ಲಿ ಪೊಳ್ಳೆಬೆಟ್ಟಕ್ಕೂ, ಅಲ್ಲಿಂದ ತಿಂ. 28ನೆಲ್ಲಿ ಮಡಿಕೇರಿಗೂ ಬಂದು, ಮೇ ತಿಂ. 6ರಲ್ಲಿ ಬೆಂಗಳೂರಿಗೆ ಹಿಂತಿರುಗಿ ಹೋಗುವರೆಂದು ವರ್ತಮಾನ.

ಕಮಿಷನರ್ ಆಫೀಸಿನ ಜುಡಿಷ್ಯಲ್ ತಿರುಸ್ತೆದಾರರಾದ ಮೆ ಯಂ ಗುಂಡುರಾಯರು ತಿಜೆ ತೀರಿ ಈ ತಿಂ. 28ನೆಲ್ಲಿ ತಮ್ಮ ಹುದ್ದೆಯ ಚಾರ್ಜು ವಹಿಸಿಕೊಳ್ಳುವರೆಂದೂ, ಹುಗಾಮಿ ತಿರುಸ್ತೆದಾರಗಿರಾರುವ ಮೆ. ಕೆ ಸುಬ್ರಾಯನವರು ಶನಿವಾರ ಸಂತೆ ವಾರುಪತ್ಯಗಾರರಾಗಿ ವರ್ಗಾಯಿಸಲ್ಪಡುವರೆಂದೂ ತಿಳಿಯಬರುತ್ತದೆ.

ಬರುವ ಜೂನ್ 15ರಿಂದ 3 ವರ್ಷಗಳ ವರೆಗೆ ಕೊಯಂಬುತ್ತೂರು ಎಗ್ರಿಕಲ್ಚರಲ್ ಕಾಲೇಜಿನಲ್ಲಿ ತಾವೇತು ಹೊಂದಲು ತಿಂಗಳಿಗೆ ರೂ 25 ವೇತನದಲ್ಲಿ ಇಬ್ಬರನ್ನು ಸ್ಥಳೀಯ ಸರ್ಕಾರದವರು ಕಳುಹಿಸುವರೆಂದೂ, ಇಂಟರ್‌ಮೀಡಿಯೇಟ್ ಪರೀಕ್ಷೆ ಪಾಸಾದವರು ಮೊತ್ತ ಬರುವ ಮೇ 25 ರೊಳಗೆ ತಮ್ಮ ಅಪ್ಲಿಕೇಶನ್ ಕಳುಹಿಸಬೇಕೆಂದೂ ಪ್ರಕಟವಾಗಿದೆ

ಕೊಡಗು ಎಲೆಕ್ಟ್ರಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದ ಟೆನ್ನಿಸ್ ಟೂರ್ನಮೆಂಟಿನ ತಾ 10ರಲ್ಲಿ ನಡೆದ ಡಬ್ಬಲ್ಸ್ ಆಟದಲ್ಲಿ ವ್ಯಾಲಿ ಕ್ಲಬ್ಬಿನ ಪರ ಮೈಸೂರಿನ ಮೆ. ಕೃಷ್ಣಸ್ವಾಮಿರಾವ್ ಮತ್ತು ಮೆ. ಸುಬ್ಬರಾವ್‌ರವರು ಎ ಕೆ ಸ್ಪೋರ್ಟಿಯ ಕ್ಲಬ್ಬಿನ ಮೆ ಎ. ಸಿ. ತಿಮ್ಮಯ್ಯ ಮತ್ತು ಮೆ. ರಾಘವನ್‌ರವರನ್ನು ಸೋಲಿಸಿ ಇನಾಮಿನ ಬಟ್ಟಲ್ಲನ್ನು ಗೆದ್ದರು. ಗೆದ್ದವರಿಗೆ ಇನಾಮಿನ ಬಟ್ಟಲ್ಲನ್ನು ಕಮಿಷನರವರು ಕೊಟ್ಟರು.

ಹಿಂದೂದೇಶ.

ತಿರುವಾಂಕೂರ್ ಶಿಕ್ಷಣ ಪ್ರಚಾರ ಸರಿಸತ್ತಿನವರು ಹರಿಜನರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಏರ್ಪಾಡು ಮಾಡಿಡುತ್ತಿರುವರು.

ಬೆಳ್ಳಿಯು ಕ್ಷಯರೋಗದಲ್ಲಿ ಹೆಚ್ಚು ಕೆಲಸ ಮಾಡುವದೆಂದು ಜರ್ಮನ್ ಡಾಕ್ಟರನೊಬ್ಬನು ಕಂಡುಹಿಡಿದಿರುವನು. ಬೆಳ್ಳಿಯು ಗಂಟು ಕ್ಷಯದ ಕ್ರಿಮಿಗಳನ್ನು ನಾಶಪಡಿಸುವುದಂತೆ.

ಇದೇ ತಾರೀಕು 2ನೆಲ್ಲಿ ಪ್ರಾರಂಭವಾದ ಬಾಮುಖಂಡಿ ಸಂಸ್ಥಾನದ ಶಾಸನಸಭೆ ಮಂಡಳಿಯಲ್ಲಿ ಇವ್‌ಕಂಟ್ಯಾಕ್ಷನ ವಿಷಯವಾಗಿ ಪ್ರಾಸಾಧ್ಯರಿಂದ ಕೆಲ ಸಭಾಸದರು ನಿಷೇಧಾರ್ಥವಾಗಿ ಸಭಾತ್ಯಾಗಮಾಡಿದ ಎಂದು ಹೇಳಿದರು.

ಈ ತಿಂ. 18ರಲ್ಲಿ ಹಿಂದೂ ದೇಶಕವಿಂದ ಹೊರಟು ಹೋಗಲಿರುವ ವೈಸರಾಯರಾದ ಲಾರ್ಡ್ ವೆಲ್ಲಿಂಗ್ಟನ್‌ರವರು ದಿಲ್ಲಿಯಲ್ಲಿ ಎಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟಿನ ಜಾಯಿಂಟ್ ಸಭೆ ಸೇರಿಸಿ 40 ನಿಮಿಟುಗಳ ವರೆಗೆ ತಮ್ಮ ವಿದಾಯ ಭಾಷಣವನ್ನಿತ್ತರು. ಕಾಂಗ್ರೆಸ್ ಪಕ್ಷದವರಾದರೂ ಹಾಜರಿರಲಿಲ್ಲ. ವೈಸರಾಯರು ಕಾಂಗ್ರೆಸ್ ಮೆಂಬರುಗಳಿಗೆ ತಮಗೆ ಪ್ರತಿ ಸಂದರ್ಭದಲ್ಲಿ ಮಾಡುತ್ತಿದ್ದ ಆದರಾತಿಥ್ಯಗಳಿಗೆ ಕೃತಜ್ಞತೆ ತಿಳಿಸಿದರು. ಮತ್ತು ತಮ್ಮ ಆಳ್ವಿಕೆಯಲ್ಲಿ ನಡೆದ ದಬ್ಬಾಳಿಕೆಗಳು ಅನಿವಾರ್ಯತೆ ಮತ್ತು ಸಂದರ್ಭವನ್ನು ವಿವರಿಸಿ, ಈಗಣ ದೇಶದ ಶಾಂತತೆ ಮತ್ತು ಅಭಿವೃದ್ಧಿಗೆ ಕುರಿತು ಸಂತೋಷ ಸೂಚಿಸಿದರು, ದೇಶದ ವ್ಯವಸಾಯಾಭಿವೃದ್ಧಿ, ನಿರುದ್ಯೋಗ ನಿವಾರಣೆ, ಹೊಸ ರಾಜ್ಯಾಂಗ ರಚನೆಯಲ್ಲಿ ಹಿಂದು ದೇಶವು ಪಡೆಯುವ ಹೆಚ್ಚಿನ ಜವಾಬ್ದಾರಿ ಮತ್ತು ಅಧಿಕಾರದ ಕುರಿತು ಪ್ರಸ್ತಾಪಿಸಿದರು.

ಲೆಕ್ಕಿಕಲ್ ಸೆಲ್ಫ್-ಗವರ್ನಮೆಂಟ್ ಕಾನ್‌ಫರೆನ್ಸು ದೆಹಲಿ ನಗರದಲ್ಲಿ ನೂರ್ಚಿ ತಾ. 30 ಕ್ಕೆ ಮುಗಿದಾಗ ಹಲವು ನಿರ್ಣಯಗಳ ಅಂಗೀಕೃತವಾದವು. ಮುಂದಿನ ಜೂನ್ ತಿಂಗಳಿನಲ್ಲಿ ಜರ್ಮನೀ ದೇಶದ ಮುಖ್ಯ ಪಟ್ಟಣವಾದ ಬರ್ಲಿನ್ ನಗರದಲ್ಲಿ ನಡೆಯುವ ಅಂತರ ರಾಷ್ಟ್ರೀಯ ವಿದ್ಯುತ್ಸಾಧಕರ ಕಾನ್‌ಫರೆನ್ಸಿಗೆ ಮಿ. ನಳಿನಿರಂಜನ ಸರ್ಕಾರ್ ಮತ್ತು ಎ. ಬೀ ತನ್‌ರಾಮ್ ಇವರಿಬ್ಬರನ್ನು ಇಂಡಿಯಾ ದೇಶದ ಪ್ರತಿನಿಧಿಗಳಾಗಿ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು. ಇಂತಿಯೂ ಸರ್ಕಾರದವರು. ನೇರವಾಗಿಯಷ್ಟಾಗಲಿ ಪ್ರಾಂತಿಕ ಸರ್ಕಾರಗಳ ಮುಖಾಲಿಕವಾಗಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಸಾಲ ಕೊಡಬೇಕೆಂದೂ, ತಾವು ಯಾವ ಬಡ್ಡಿ ದರವು ಮೇಲೆ ಮಹಾಜನರಿಂದ ಸಾಲ ತೆಗೆದುಕೊಳ್ಳುತ್ತಾರೋ ಅದಕ್ಕಿಂತಲೂ ಶೇಕಡ ಒಂದರಷ್ಟು ಸ್ಥಳೀಯ ಸರ್ಕಾರಗಳಿಂದ ಬಡ್ಡಿ ಹೆಚ್ಚಾಗಿ ವಸೂಲು ಮಾಡಬಹುದೆಂದೂ ಪ್ರಾಥಿಸತಕ್ಕದ್ದೆಂದೂ ನಿಷ್ಕರ್ಷೆಯಾಯಿತು. ಎಲ್ಲಾ ಪ್ರಾಂತ್ಯಗಳ ಸ್ಥಳೀಯ ಸಂಘಗಳು ಪ್ರಜೆಗಳಿಂದ ಪಡೆಯುವ ಪ್ರಾಪರ್ಟಿ ಟೆಕ್ಸಿಗಳಿಂದ ಪೈಸಿಡಂಟರನ್ನು ಹೊಂದಿಕೊಳ್ಳುವುದೂ, ಅಥವಾ ಬೇರಾವ ಪದ್ಧತಿಗಳು ಬೇಕಾದರೂ ಅವಕ್ಕೆ ಇನ್ನೂ ಒಂದೆರಡು ವರ್ಷಗಳಾದರೂ ಹಿಡಿಯಬಹುದೆಂದೂ ತೀರ್ಮಾನವಾಯಿತು. ಹಳ್ಳಿಗಾಡಿನ ಪೊಲೀಸ್ ಶಾಖೆಯ ಸುಧಾರಣೆಗಾಗಿ ಹಳ್ಳಿಯ ಸಂಘಗಳಿಗೆ ಪೊಲೀಸ್ ಸಂಬಂಧವಾದ ಕೆಲಸಗಳನ್ನು ನಾಮಿನೇಷನ್ ಮುಖಾಲಿಕ ನೇಮಿಸುವ ಪದ್ಧತಿಯನ್ನು ತಪ್ಪಿಸಿ ಅಲ್ಪ ಸಂಖ್ಯಾತ ಪಂಗಡಗಳವರಿಗೂ ಇತರ ವಿಶೇಷ ಕ್ಷೇತ್ರದ ಸಂಸ್ಥೆಗಳ ಪ್ರತಿನಿಧಿಗಳಿಗೂ ಅವಕಾಶ ಕಲ್ಪಿಸಿಕೊಡಬೇಕೆಂದು ತೀರ್ಮಾನಿಸಲಾಯಿತು.

ಲೀಕರ್ನೊ ಒಪ್ಪಂದವನ್ನು ಜರ್ಮನಿಯು ಮುರಿದ ವಿಷಯದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳೊಳಗೆ ಭಿನ್ನಾಭಿಪ್ರಾಯ ಉಂಟಾಗಿ ಲೀಗಿನ ಅಸ್ತಿತ್ವಕ್ಕೇನೇ ಹಾನಿಯುಂಟಾಗುವ ಸಂಭವ ಉಂಟಾಗಿದೆ.

ಇಟಲಿಯಲ್ಲಿ ಮುಸೊಲಿನಿಯವರ ಧೋರಣೆಗೆ ವಿರೋಧವು ದಿನೇ ದಿನೇ ಪ್ರಬಲವಾಗುತ್ತಿದೆಯೆಂಬ ತಿಳಿಯಬರುತ್ತದೆ. ಅಬಿಸೀನಿಯ ವಿಷಯದಲ್ಲಿ ಇಟಲಿಯು ಜೈಸಲಿ ಸೋಲಲಿ, ಅವರ ದಿವಾಳಿಗೆ ನಿಶ್ಚಯವಾಗಿದೆ. ಅವರ ಹೊಸಗಣ ವ್ಯಾಪಾರವೆಲ್ಲಾ ನಿಂತುಹೋಗಿದೆ. ಜನರಲ್ಲೆಲ್ಲಾ ಅತೃಪ್ತಿಯುಂಟಾಗಿದೆ. ಅವರಿ ಗುಪ್ತಚಾರರ ಬೆದರಿಕೆಯಿಂದ ಯಾರೂ ಉಸಿರೆತ್ತದೆ ಸುಮ್ಮನಿರುತ್ತಾರೆ.

ಯುದ್ಧ ವಾರ್ತೆ.

ಏಪ್ರಿಲ್ ತಾ. 9.

ಇಟಲಿಯವರ ಮುಂದೊತ್ತು ವಿಕೆ.

ಇಟಲಿಯವರು ಈಗ ಎಲ್ಲಾ ಕಡೆಗಳಿಂದಲೂ ಭರದಿಂದ ಮುಂದೊತ್ತುತ್ತಲಿರುವರು. ಈಡೆಗೆ ತಿಳಿದುಬಂದ ವರ್ತಮಾನದಿಂದ ಡೆಸ್ಸಿಯನ್ನು ಆಕ್ರಮಿಸಲು ಮುಂದುವರಿಯುತ್ತಲಿರುವ ಇಟಲಿ ಸೈನ್ಯವು ಏನೊಂದೂ ಆತಂಕವಿಲ್ಲದೆ ಕೊಬೋ ಎಂಬ ಪಟ್ಟಣವನ್ನು ಶೈವಶಕ್ತಿಸಿಕೊಂಡುದಾಗಿ ತಿಳಿಯಬಂದಿದೆ ಈ ಸೈನ್ಯಗಳು ಅತೀ ವೇಗದಲ್ಲಿ ಮುಂದೊತ್ತುತ್ತಲಿರುವುದರಿಂದ ಅವರಿಗೆ ಆಹಾರ ಸಾಮಗ್ರಿಗಳು ಸಮಯಕ್ಕೆ ಸರಿಯಾಗಿ ಆ ಕಾರಣದಿಂದ ವಿಳಂಬನಗಳ ಮೂಲಕ ಸಕ್ಷಬರಾಯಿಯೊಗುತ್ತವೆ

ಭಯಂಕರ ಕಾಳಗ.

ಗೇಜ್ರೆ ಡೇಕೆ ಎಂಬಲ್ಲಿಗೆ ಸವಿಾಪಪಟ್ಟಿರುವ ಬಿಕೊಸ್ ಎಂಬಲ್ಲಿ ಇಟಲಿಯವರಿಗೂ ಅಬಿಸೀನಿಯನರಿಗೂ ಭಯಂಕರ ಕಾಳಗವು ಐದು ದಿವಸಗಳಿಂದ ನಡೆಯುತ್ತಲಿದೆಯಂತೆ. ಇತ್ತಂಡದವರಿಗೂ ವಿಪರೀತ ನಷ್ಟವಾಗಿದೆ.

ಏಪ್ರಿಲ್ ತಾ. 10.

ವಿಷಗಾಳಿ ಪ್ರಯೋಗ.

ಉತ್ತರದಲ್ಲಿ ಡಗ್ಲಾಬುರ್ ಮತ್ತು ಶಾಸಬನೆ ಎಂಬಲ್ಲಿಗೆ ಇಟಲಿಯವರು ವಿಷಗಾಳಿಯ ಬಾಂಬುಗಳನ್ನು ಹಾಕಿದರು. ಅವರ ಪಡಾವಿನವಾಗಿ 80 ಮಂದಿ ಅಬಿಸೀನಿಯರ ಕಣ್ಣು ಕಾಣಿಸಕೋಶ ಮತ್ತು ಚರ್ಮ ಸುಟ್ಟಹೋಗಿದೆಯಂತೆ. ಈ ವಿಷದ ರಾಷ್ಟ್ರಗಳ ಕೂಟದವರಲ್ಲಿ ಅಬಿಸೀನಿಯನರು ಪುಕಾರು ಮಾಡಿರುವರು.

ಇಟಲಿ ಸೈನ್ಯಕ್ಕೆ ನಷ್ಟ.

ಕಳೆದ ಅಕ್ಟೋಬರಿನಿಂದ ಈ ವರ್ಷಾರ್ ಆಖೈರು ವರೆಗೆ ಒಟ್ಟು 984 ಮಂದಿ ಇಟಲಿ ಸೈನಿಕರೂ, 979 ಇಟಲಿ ಸೈನ್ಯಕ್ಕೆ ಅಫ್ಘಾನಿಸ್ತಾನವೂ ಮಡಿದಿರುವರೆಂದೂ; 1936ನೇ ಜನವರಿ ಪ್ರಾರಂಭದಿಂದ ಈ ವರೆಗೆ 589 ಇಟಲಿ ಸೈನಿಕರು ಕಾಯಿಲೆ ಮುಂತಾದುವುಗಳಿಂದ ಸತ್ತಿರುವರೆಂದೂ ಇಟಲಿಯವರು ಪ್ರಕಟಿಸಿರುವರು.

ಏಪ್ರಿಲ್ ತಾ. 11.

ಜಕ್ಕವರ್ತಿಗಳ ಬೇಡಿಕೆ.

ರಾಷ್ಟ್ರಗಳ ಸಂಘವು ಇಟಲಿ ಅಬಿಸೀನಿಯ ರಾಜಿ ಪ್ರಸಕ್ತಿಯಲ್ಲಿ ಬಹಳ ಅಶ್ರದ್ಧೆಯನ್ನು ವಹಿಸಿರುವದೆಂದೂ, ಒಡನೆ ತಾಜಿ ಕಾರ್ಯಗಳನ್ನು ಪೂರೈಸಬೇಕೆಂದೂ, ಇಟಲಿಯವರ ಭಯಂಕರ ಯುದ್ಧದ ಪರಿಣಾಮವನ್ನು ಸಹಿಸಲಿಕ್ಕಾಗುವುದಿಲ್ಲವೆಂದೂ ಅಬಿಸೀನಿಯ ಚಕ್ರವರ್ತಿಗಳು ರಾಷ್ಟ್ರಗಳ ಸಂಘಕ್ಕೆ ವಿನ್ನವಿಸಿಕೊಂಡಿರುವರೆಂದು ವಾರ್ತೆ ಒಂದಿದೆ.

ಏಪ್ರಿಲ್ ತಾ. 12.

ಇಟಲಿಯವರ ಯಶಸ್ವಿಯಾದ ಆಕ್ರಮಣ.

ಇಟಲಿಯವರು ಈಗ ಅನೇಕ ಪಾರ್ಶ್ವಗಳಿಂದ ಸುತ್ತುಗಟ್ಟಿ ಮುಂದುವರಿಯುತ್ತಿದ್ದಾರೆ. ಬೆನೀಡೋಗ್ನಿಯೋರವರ ಪ್ರಕಟಣೆ ಸ್ಕಾರ ಗೋರ್ಗೋರಾ ಮತ್ತು ಗಲಭಾಟ್ ಎಂಬ ಎರಡು ಸ್ಥಳಗಳು ಇಟಲಿಯವರ ಕೈವಶವಾದುವೆಂದು ತಿಳಿಯಬರುತ್ತದೆ. ತಾ. 21ನೇ ಏಪ್ರಿಲಿಗೆ "ರೋಮ್ ನಗರದ ಜನ್ಮೋತ್ಸವದ ದಿನ" ವಾದುದರಿಂದ ಆ ಸಮಯಕ್ಕೆಲ್ಲಿ ದೊಡ್ಡ ನಗರಗಳಾದ ಡೆಸ್ಸಿ ಆದಿವಾ ಹರರ್‌ಗಳನ್ನು ಸ್ವಾಧೀನ ಪಡಿಸಬೇಕೆಂದು ಮೂರ್ಸಲ್ ಬೆನೀಡೋಗ್ನಿಯವರು ಪ್ರಕಟಿಸಿರುವರು.

ಜಕ್ಕವರ್ತಿಗಳು ವೇಶ ಬದಲು ಮಾಡಿರುವರು.

ಚಕ್ರವರ್ತಿಗಳು ಈಗ ಸ್ವತಃ ಯುದ್ಧದ ಸೂತ್ರಧಾರತ್ವವನ್ನು ವಹಿಸಿರುವರು. ತತ್ಕಾಲಕ್ಕಾದರಾಗಿ ತನ್ನ ಗೌರವಹತ್ತ ಬಾರದೆಂದು ಅವರು ಈಗ ಬೇರೆ ಬಗೆಯ ವಸ್ತ್ರವನ್ನು ಧರಿಸಿರುವರಂತೆ. ಇವರನ್ನು ರಾಜ್ಯಚ್ಯುತನಾಗಿ ಮಾಡಿ ಹಾರಾರಿನ ಡಿಕ್ಟೇಟರನ್ನು ರಾಜಸಿಂಹಾಸನಕ್ಕೇರಿಸುವ ಯತ್ನವನ್ನು ಇಟಲಿಯವರು ಮಾಡುತ್ತಿರುವರಂತಾಗಿ ವರ್ತಮಾನ ಹಬ್ಬಿದೆ.

ಏಪ್ರಿಲ್ ತಾ. 13.

ರಾಜಧಾನಿಯ ಮೇಲೆ ವಿಮಾನಗಳ ಹಾರಾಟ.

ಅಡ್ವಿಸ್ ಅಬಾಬದ ಮೇಲೆ ಈಗ ಆಗಾಗ್ಗೆ ಇಟಲಿ ವಿಮಾನಗಳು ಹಾರಾಡುತ್ತಲಿವೆ ಆದರೆ ಬಾಂಬು ಈ ವರೆಗೆ ಎಸೆದಿರುವದಿಲ್ಲ. ಜನರೆಲ್ಲರೂ ಭಯಭೀತರಾಗಿರುವರು.

ಏಪ್ರಿಲ್ ತಾ 14.

ಶಾಂತಿಗಾಗಿ ವಿನ್ನಪ.

ಅಬಿಸೀನಿಯಾ ಚಕ್ರವರ್ತಿನಿಯವರು ಇಡೀ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಅಬಿಸೀನಿಯಾದ ವಿಷಯ ಸಹಾನುಭೂತಿ ತೋರಿ ಶಾಂತಿ ಸ್ಥಾಪಿಸಬೇಕೆಂದು ವಿನ್ನಪಿಸಿರುವರು.

ಇಟಲಿಯವರ ಪ್ರಚಾರ ಕಾರ್ಯ.

33 ಇಟಲಿಯ ದೊಡ್ಡ ವಿಮಾನಗಳೂ, 13 ಬಾಂಬು ವಿಮಾನಗಳೂ ಅಬಿಸೀನಿಯಾದ ರಾಜಧಾನಿಯಾದ ಅಡ್ವಿಸ್ ಅಬಾಬದ ಮೇಲೆ ಈ ದಿನ ಹಾರಿದವು. ಅವುಗಳಿಂದ ಅಬಿಸೀನಿಯಾದಲ್ಲಿದ್ದ ಗುಲಾಮುಗಿರಿಯನ್ನು ಇಟಲಿಯವರು ರದ್ದು ಮಾಡಿರುವ ಪ್ರತಾಪೀಜಾಪೀರುವಾನೆಗಳ ಹಸ್ತ ಪತ್ರಗಳು ರಾಜಧಾನಿಯ ಮೇಲೆ ಚೆಲ್ಲಲ್ಪಟ್ಟವು. ಅಲ್ಲದೆ ಇಟಲಿಯ ಪರ ಪ್ರಚಾರ ಕಾರ್ಯಗಳ ಅನೇಕ ಹಸ್ತಪತ್ರಗಳೂ ಹಾಕಲ್ಪಟ್ಟವು.

ಏಪ್ರಿಲ್ ತಾ. 15

ಡೆಸ್ಸಿಯು ಇಟಲಿಯವರ ವಶವಾಯಿತು.

ಡೆಸ್ಸಿಯು ಇಟಲಿಯವರ ಕೈವಶವಾಯಿತೆಂದು ತಿಳಿಯಲಾಗಿದೆ.

FOR SALE.

80 Acres of good Jungle fit for orange, or coffee cultivation and 330 Batties of wet-land near Gattadalla & Silpi estates in Karadigode Village. Intending purchasers may write to the below address.

ಮಾರಾಟಕ್ಕಿದೆ.

ಸಿದ್ದಾಪುರದ ಕಡಿಗೋಡು ಗ್ರಾಮದಲ್ಲಿ ಗಟ್ಟದಳ್ಳ ಮತ್ತು ಸಿಲ್ಪಿ ತೋಟದ 80 ಏಕರೆ ಕಾಡು ಮತ್ತು 330 ಬಟ್ಟಿ ಸಾಗುವಳಿ ಗದ್ದೆ ಮಾರಾಟಕ್ಕಿದೆ. ಕಾಡು ಕಾಫಿ, ಕಿತ್ತಳೆ ವ್ಯವಸಾಯಕ್ಕೆ ಬಹಳ ಉತ್ತಮವಾಗಿದೆ. ಗದ್ದೆ ಮೇಲ್ಗಡೆ ಕೆರೆಯಿದೆ. ಸದಾ ನೀರಾವರಿ. ಖಾಯಸ್ದಾರರು ಒಡನೆ ಈ ವಿಳಾಸದಾರರಲ್ಲಿ ಪತ್ರದ್ವಾರ ಯಾ ಖುದ್ದಾಗಿ ತಮ್ಮ ಇಕಾದೆ ತಿಳಿಸಬಹುದು.

ಕೆ. ಕೆ. ನಾಜುಂಡ,
ಕಡಿಗೋಡು ಎಸ್ಟೇಟ್,
ಸಿದ್ದಾಪುರ, ಕೊಡಗು.

4—2

ಪ್ರಕಟಣೆ.

ಏಪ್ರಿಲ್ ತಾ. 5ರಲ್ಲು ವೀರಾಜಪೇಟೆನಾಡು ಕೊಟ್ಟೋಳಿ ಗ್ರಾಮದಲ್ಲಿರುವ ನನ್ನ ಕೊಟ್ಟಗೆಯಿಂದ 3 ರಾಸು ಹೋರಿಗಳು ತಪ್ಪಿಸಿಕೊಂಡು ಹೋಗಿರುತ್ತವೆ. ಇವುಗಳನ್ನು ಯಾರಾದರು ಕಂಡು ಪತ್ತೆಮಾಡಿ ಕೊಟ್ಟಲ್ಲು ಅಂಥವರಿಗೆ ಮೂರು ರೂಪಾಯಿಗಳನ್ನು ಇನಾಮಾಗಿ ಕೊಡುತ್ತೇನೆ.

ಕೆಂಪು ವರ್ಣದ 4 ಹಲ್ಲಿನ ಸುಮಾರು ಅರ್ಧ ಅಡಿ ಉದ್ದವಿರುವ ನೆಟ್ಟಗೆಕೋಡಿನ ಬೀಜ ಒಡೆಯದ ಒಂಟಿ ಬೀಜದ ಹೋರಿ ಒಂದು, ಬೂದು ಬಿಳಿ ವರ್ಣದ ಸ್ವಲ್ಪ ಅಡ್ಡವಾಗಿ ಸುಮಾರು 1 ಗೇಣಿನ ಮೇಲಿರುವ ಕೋಡಿನ ಬೀಜ ಒಡೆದಿರುವ ಅರ ಹಲ್ಲಿನ ಹೋರಿ ಒಂದು ಮತ್ತು ಸಾಧಾರಣ ಕಪ್ಪು ವರ್ಣದ ಕುಡಿಕೆ ಕೋಡಿನ ಮುಕ್ಕಾಲಡಿ ಉದ್ದವಿರುವ ಬೀಜ ಒಡೆದಿರುವ ಬಾಯಿಕೂಡಿ 2 ಯಾ 3 ವರ್ಷಗಳಾಗಿರುವ ಹೋರಿ ಒಂದು.

ಮೇಲೆ ವಿವರಿಸಿರುವ ರಾಸುಗಳನ್ನು ಪತ್ತೆ ಮಾಡಿ ಕೆಳಗಿನ ವಿಳಾಸದಾರರಿಗೆ ತಿಳಿಸಿದಲ್ಲು ಬಹುಮಾನವನ್ನು ಕೊಡಲಾಗುವುದು.

ಕೊಟ್ಟೋಳಿ ಗ್ರಾಮ,
ವೀರಾಜಪೇಟೆ. ಕೋಣೇರೀರ ಬೆಳ್ಳಪ್ಪ.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಪ್ರದತೆಯು ಏಣಾಯಿಸ್ಸೇರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನಿಂದಕ್ಕೆ ರೂ. 1.

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮುಶಾಸ್ತ್ರನನ್ನೋದಿರಿ.

ಆತಂಕನಿಗ್ರಹ ಫಾರ್ಮಸಿ, ಜಿಕ್ಕಜೇಬಿಚಾಳ,
52—3 ಬೆಂಗಳೂರು ಸಿಟಿ.

ಪ್ರಕಟಣೆ.

Repairing chairs, easy chairs, cane chairs, cots etc. in rattan will be done in singles, doubles and diamond at moderate charges.

ಬೆತ್ತದ ಕುರ್ಚಿ, ಆರಾಮು ಕುರ್ಚಿ ಮತ್ತು ಮಂಚ ಮುಂತಾಕುವುಗಳನ್ನು ತೃಪ್ತಿಕರವಾಗಿ ಅತಿ ಸುಲಭ ಚಾರ್ಜಿನಲ್ಲಿ ಬೆತ್ತದಿಂದ ಮಾಡಲಾಗುವುದು.

Apply to:—

P. S. RAMAPPA,
Rattan Works,
MecDowell & Co., Buildings,
Mercara.

4—2

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮೋರಂಗದಲ್ಲಿ ಯೋಗ್ಯಸ್ಥಾನವನ್ನು, ಉಚ್ಚಗೌರವವನ್ನೂ ಸಂಪಾದಿಸಿರುವ

ಮುಂಗಳೂರಿನ

ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಬಲುಮೆಯು ಈ ಸಂಸ್ಥೆಯಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯಮೇತನದ ಫಲಿತಾಂಶವಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮೋಪತ್ರದ ಮೇಕೆ,—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಪರೀಕ್ಷೇತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮೋಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ನ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯು ಹಸ್ತಕಾದಿಗಳಿಗೆ:—

ಮುಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜೆ. ಬೆಳ್ಳಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—8)

ಸುಂಟಿಕೊಪ್ಪ ಏಜಂಟರು—
ಏ. ಎಸ್. ಮಾಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಬರ್ರಿ ಬರ್ರಿ! ಒನ್ಮೆ ಪರೀಕ್ಷಿಸಿರಿ! ಸಂತಸಪಡಿರಿ!

ಶ್ರೀ ವೆಂಕಟರಮಣಸ್ವಾಮಿ ಥಿಯೆಟ್ರಿಕಲ್ ಕಂಪೆನಿ, ಕಾರ್ಕಳ ಇವರ ನಾಟಕ ಸಭಾ.

ಈ ಮೇಲಿನ ನಾಟಕ ಮಂಡಳಿಯವರು ಮೈಸೂರು ಮತ್ತು ಉತ್ತರ ಕನ್ನಡ ದೇಶಗಳಲ್ಲಿ ಗಾಯನದಲ್ಲಿ ಹೆಸರು ಹೊಂದಿದ ಆಳ್ವರ್‌ಗಳಿಂದ ಕೂಡಿ ಬಂದು ಇನ್ನೇ ತಿಂಗಳಲ್ಲಿ ಇಲ್ಲಿಯ ಒವಿಸಿನ್ಸಾರಕ ಸಂಘದ ಹಾಲ್‌ನಲ್ಲಿ ಪ್ರಖ್ಯಾತಿಪಟ್ಟ ಕೆಲವು ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನಾಡಿ ಜನರ ಮನಸಂತೋಷಿಸಿ ತೆರಳುವರಾಗಿದ್ದಾರೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ಸ್ವಾರ್ಥನೆ

ಯೆನ್. ಆರ್. ಬಂಟ್ವಾಳಕರ್,
(ಪ್ರೊಪ್ರೈಟರ್.)

NOTICE.

Mercara, the 9th April, 1936.

1. It is proposed to depute two candidates to undergo training in the Agricultural College, Coimbatore, for three years with effect from the 15th June, 1936, on a stipend of Rs 25 each per mensem.

2. Applications will be received up to the 25th May 1936

3. Candidates must have reached the age of 18 years on or before the 15th of June in the year when application is made and must produce the following certificates;—

(a) Certificate of the physical fitness granted by a registered Medical Practitioner.

(b) Vaccination certificate showing that the candidate has been vaccinated or has had small-pox after the age of 10

(c) University certificate

(d) Testimonials of good character covering the previous two years

(e) Leaving certificate from the head of the institute last attended

4. Applications must be in the candidates' own hand writing.

5 Candidates must have passed completely the Intermediate Examination in Arts and Science of the University of Madras and have qualified in group I or II thereof or an examination of some other University recognised as equivalent thereto.

6. The selection of candidates will be made by the Commissioner at 10 a m on the 29th May, 1936. Applicants should appear in person. The selected candidates will have to appear before the Selection Board at Coimbatore, in June on the dates that will be notified. The Board will make the final selection

7. The successful candidates at the final selections should be required to execute an undertaking binding themselves to serve the Coorg Administration, whenever required, at the close of the training course.

8. Any further information on the subject can be had in the office of the undersigned.

K, Chengappa,
Dy. Director,
Land Records and Agriculture, Coorg.

ಕಾಂಗ್ರೆಸ್ ಅಧ್ಯಕ್ಷರ ಭಾಷಣದ ಸಾರಾಂಶ.

ಸಂಗಾತಿಗಳೇ,

ನನಗೆ ಪುನಃ ಹಿಂದೂಸ್ಥಾನಕ್ಕೆ ಬರಲು ಈ ಅವಕಾಶ ದೊರೆತದ್ದಕ್ಕೆ ಎಷ್ಟೋ ಸಂತೋಷ. ಈ ಮಧ್ಯೆ ನಮ್ಮ ವಿಶ್ವರಾಗಿದ್ದವರು ಅನೇಕರು ಕಾಲವಾಗಿದ್ದು ಬಹಳ ವಿಷಾದಕರವಾಗಿದೆ. ಅವರನ್ನೆಲ್ಲಾ ಈ ಸಮಯದಲ್ಲಿ ಸ್ಮರಣೆಗೆ ತಂದುಕೊಳ್ಳದೆ ಇರಲಾರೆನು. ನಮ್ಮ ಸಾಹಸ ಪ್ರಯತ್ನಗಳು ಶತಶ್ಕಾಲದಲ್ಲಿ ಫಲಕಾರಿಗಳಾಗದೆ ಹೋಗಿರುವವೆಂದು ನಮ್ಮಲ್ಲಿ ಯಾರೂ ಅಧೈರ್ಯಪಡಬಾರದು. ಈಗ್ಗೆ ಸುಮಾರು 16 ವರ್ಷಗಳ ಹಿಂದೆ ಕಾಂಗ್ರೆಸು ಸಹಾಯ ನಿರಾಕರಣ ಸಂಘಟನೆಯನ್ನು ಪ್ರಾರಂಭ ಮಾಡಿದ ಮೇಲೆಯೇ ಕಾಂಗ್ರೆಸ್ಸಿನ ಸ್ಥಾನಮಾನಗಳಿಗೆ ಬೆಲೆಯುಂಟಾಯಿತು. ಇತರ ದೇಶಗಳಲ್ಲಿ ನಡೆಯುತ್ತಿರುವ ವಿದ್ಯಾಮಾನಗಳೇನೆಂಬುದನ್ನು ನಾವು ಸ್ಮರಣೆಗೆ ತಂದುಕೊಳ್ಳದೆ ಹೋದರೆ ಹಿಂದೂಸ್ಥಾನಕ್ಕೆ ಅದರ ಸಹ

ಜವಾದ ಸ್ಥಾನವು ದೊರೆಯುವುದಿಲ್ಲ. ಯೂರೋಪಿನ ಘೋರ ಯುದ್ಧವು ಮುಕ್ತಾಯವಾದನೆಂತೆಲೆ ಆ ಖಂಡದ ರಾಜ್ಯಗಳಲ್ಲಿ ತಳಮಳಗಳುಂಟಾಗಿ ನೆನ್ಮೆದಿಗೆ ಭಂಗ ಬಂದಿರುವುದು. ರಷ್ಯಾ ರಾಜ್ಯ ಒಂದರಲ್ಲೇ ಎಲ್ಲಾ ವಿಚಾರಗಳಲ್ಲೂ ಅಬಿವೃದ್ಧಿಯು ಕಂಡುಬಂದಿರುತ್ತದೆ 'ಸೋಷಲಿಜಂ'ನ ಫಲವೇ ಅದು. ಈ 'ಸೋಷಲಿಜಂ'ಎನ್ನುವುದು ಯೂರೋಪಿನ ಇತರ ರಾಜ್ಯಗಳ ಫ್ಯಾಸಿಜಂಗೂ (ಸರ್ವಾಧಿಕಾರವೂ ಒಬ್ಬ ವ್ಯಕ್ತಿಯಲ್ಲೇ ಐಕ್ಯವಾಗಿರುವುದು), ಇಂಪೀರಿಯಲಿಜಂಗೂ (ಪರದೇಶೀಯರನ್ನು ಅಧೀನಕ್ಕೆ ತಂದುಕೊಂಡು ಆಳುವುದು) ವಿರೋಧವಾದುದು. ಹಿಂದೂಸ್ಥಾನದಲ್ಲಿ ಬ್ರಿಟಿಷರ ಆಳುವಿಕೆಯು ಸಾರ್ಥಕವಾಗಿಯೂ, ಶ್ರೇಯಸ್ಕರವಾಗಿಯೂ ಆಗದೆ ಹೋದ್ದರಿಂದ ದೇಶದ ಬಡತನವೇ ಮೊದಲಾದ ವಿಷಯಗಳನ್ನು ಬಗೆಹರಿಸುವುದು ಯಾವ ಪರದೇಶೀಯರ ಆಳ್ವಿಕೆಯಿಂದಲೂ ಸಾಧ್ಯವಲ್ಲ. ಹಿಂದೂಸ್ಥಾನದಲ್ಲಿ ಗವರ್ನಮೆಂಟಿನವರು ಪ್ರಜೆಗಳ ಮತ್ತು ಅವರ ಮುಂದಾಳುಗಳ ಸ್ವಭಾವಜನ್ಯವಾದ ಸ್ವಾತಂತ್ರ್ಯಕ್ಕೆ ಭಂಗವನ್ನು ತಂದಿರುವುದು ನಿಂದಾಸ್ಪದವಾಗಿದೆ. ಈಗ ಹಿಂದೂಸ್ಥಾನದಲ್ಲಿ ರಾಜಕೀಯ ಕ್ರೂರಕೃತ್ಯಗಳು ನಿಂತುಹೋಗಿವೆ. ಅವು ಒಂದು ವೇಳೆ ಇರುವುದಾದರೆ ಅವಕ್ಕೆ ಗವರ್ನಮೆಂಟಿನವರ ಕೌರ್ಯವೇ ಕಾರಣವಾಗಿದೆ. ಹಿಂದೂಸ್ಥಾನದಲ್ಲಿ ಮುಂದಾಳಾಗಿ ರಾಜಕೀಯ ಹೋರಾಟಗಳಲ್ಲಿ ಪ್ರವೇಶ ಮಾಡಿರಕಕ್ಕವರು ಬಹುತರ ಮಧ್ಯವರ್ತಿಗಳಾದ ಪ್ರಜೆಗಳೇ. ಆದರೆ ಈಗಲೂ ಇನ್ನು ಮುಂದಕ್ಕೂ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯನೃತ್ತಿಯನ್ನವಲಂಬಿಸಿರುವವರು ಸಹಾಯಕರಾಗಿಯೂ ಮುಂದಾಳುಗಳಾಗಿಯೂ ಬರಬೇಕಾಗಿದೆ

ಹಿಂದೂಸ್ಥಾನವು ಒಡಕನದಿಂದಲೂ ನಿರುದ್ಯೋಗದಿಂದಲೂ ಪಾರಾಗಬೇಕಾದರೆ 'ಸೋಷಲಿಜಂ' ಈ ದೇಶಕ್ಕೂ ಬಂದಲ್ಲದೆ ಪರಿಹಾರವಿಲ್ಲ. ವಿಸ್ತಾರವಾದ ಜಮೀನುಗಳು ಯಾರಿಗೂ ಇರ್ದಂತೆ ನೋಡಿಕೊಳ್ಳಬೇಕು; ಐಶ್ವರ್ಯವಂತರೇ ಸೇರಿ ಕಾರಖಾನೆಗಳ ಯೋಜನೆಯನ್ನು ಇಟ್ಟುಕೊಂಡಿರುವಂತೆ ಆಗಬೇಕು; ದೇಶೀಯ ರಾಜರು ಸಂಸ್ಥಾನವನ್ನು ತಮ್ಮ ಸ್ವಂತ ಆಸ್ತಿಯೆಂದು ಭಾವಿಸಿ ವರ್ತಿಸದಂತೆ ಆಗಬೇಕು. ಈ ಅಭಿಪ್ರಾಯಗಳುಳ್ಳ ಪಂಥವೇ 'ಸೋಷಲಿಜಂ' ಎಂದು ಭಾವಿಸುತ್ತೇನಾದರೂ ಕಾಂಗ್ರೆಸಿನವರೂ ಕೂಡ ಅದನ್ನನುಸರಿಸಿಯೇ ವರ್ತಿಸಬೇಕೆಂದು ಈಗ ನಾನೇನೂ ಒತ್ತಾಯಮಾಡಕಕ್ಕವನಾಗಿಲ್ಲ.

ಇಂಡಿಯಾ ಆಕ್ಟು ಕಾಂಗ್ರೆಸಿನವರು ಒಪ್ಪುವುದಿಲ್ಲವೆಂದು ಹೇಳಿ ತಿರಸ್ಕರಿಸಿಬಿಡಬೇಕೆನ್ನುವುದು ನನ್ನ ವಾದು. ಆದಾಗ್ಯೂ ಕಾಂಗ್ರೆಸು ಮೆಂಬರುಗಳು ಜುನಾವಣೆಹೊಂದಿ ಅಧಿಪತ್ಯಗಳ ನ್ಯಾಯವಿಧಾಯಕ ಸಭೆಯಲ್ಲಿ ಕುಳಿತು ಕೆಲಸ ಮಾಡಬಹುದು. ಆದರೆ ಈ ರಾಷ್ಟ್ರದ ಮುಂದಿನ ಆಳ್ವಿಕೆಯ ಲಕ್ಷಣಗಳನ್ನು ಆಲೋಚಿಸಿ ಗೊತ್ತುಮಾಡುವುದಕ್ಕಾಗಿ ಸಮಸ್ತ ಜಾತಿಕುಲಗೋತ್ರಗಳ ಪ್ರತಿನಿಧಿಗಳನ್ನೂ ಕೂಡಿಸುವುದಕ್ಕೆ ಅವಶ್ಯವಾದ ಸಾಹಸ ಪ್ರಯತ್ನಗಳನ್ನೆಲ್ಲಾ ಮಾಡುವುದೇ ಪ್ರಧಾನೋದ್ದೇಶವೆಂಬುದನ್ನು ಅಂಥಾ ಕಾಂಗ್ರೆಸ್ ಪ್ರತಿನಿಧಿಗಳು ಸರ್ವದಾ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಹಿಂದೆ 1920ನೇ ಇಸವಿಯಲ್ಲಿ ಕಾಂಗ್ರೆಸು ಮೆಂಬರುಗಳು ಆಳ್ವಿಕೆಯಲ್ಲಿ ಅಧಿಕಾರ ಸ್ಥಾನಗಳನ್ನು ಒಪ್ಪಿಕೊಳ್ಳಕೂಡದೆಂದು ಇತ್ಯರ್ಥವಾಗಿದೆ. ಈಗ ಅವನ್ನು ಅಂಗೀಕರಿಸಬಹುದೆಂದರೆ ಆ ತೀರ್ಮಾನವನ್ನು ತಿರಸ್ಕರಿಸಿದಂತಾಗುತ್ತದೆ ಕಾಂಗ್ರೆಸು ಪ್ರತಿನಿಧಿಗಳು ಸರಕಾರದ ಕಛೇರಿಗಳಲ್ಲಿದ್ದು ಆಳ್ವಿಕೆಯ ಕಾರ್ಯಕರ್ಮಗಳಿಗೆ ಅಡ್ಡಿ ಆಡಚಣೆಗಳನ್ನೊಡ್ಡಿಕ್ಕಾ ಅವನ್ನು ಸುಲಲಿತವಾಗಿ ಜರುಗದಂತೆ ಮಾಡಿಬಿಟ್ಟರೆ ಮಂದಕ್ಕೆ ಸಂಯುಕ್ತ ಆಳುವಿಕೆಯು (ಫೆಡರೇಶನ್) ಹಿಂದೂಸ್ಥಾನದಲ್ಲಿ ತಲೆಹಾಕದಂತಾಗುವುದು. ಮತ್ತು ದೇಶದ ವಿದ್ಯಾವೂನಗಳು ಯಾವ ರೀತಿ ಪರಿಣಮಿಸಿದಾಗ್ಯೂ ಈ ರಾಷ್ಟ್ರದಲ್ಲಿರುವ ದೇಶೀಯ ಸಂಸ್ಥಾನಗಳನ್ನೇನೋ ಈಗ ಇರುವಂತೆ ಇರಗೊಡಿಸುವುದು ಎಷ್ಟು ಮಾತ್ರವೂ ಸಾಧ್ಯವಲ್ಲ.

ಈ ರಾಷ್ಟ್ರದಲ್ಲಿ ಕೋಮುವಾರುಗಳ ಹೋರಾಟಗಳನ್ನು ಕುರಿತು ಯೋಚಿಸುವುದು ಸದ್ಯದಲ್ಲಿ ಅಷ್ಟೇನೂ ಮುಖ್ಯವಾದ ವಿಚಾರವಲ್ಲ. ಸ್ವಕೃತದಲ್ಲಿ ಕಾಂಗ್ರೆಸ್ಸಿನವರು ಸವಿನಯ ಶಾಸನಭಂಗ ಪಂಥವನ್ನು ಸಾರ್ವತ್ರಿಕವಾಗಿ ರೂಢಿಸುವ ಅಭಿಪ್ರಾಯವೇನೂ ಇಲ್ಲ. ಸದ್ಯದಲ್ಲಿ ಕಾಂಗ್ರೆಸಿನವರು ದೇಶದ ಆರ್ಥಿಕ ಸ್ಥಿತಿಯನ್ನು ಶ್ರೇಯಸ್ಸಿಗೆ ಬರುವಂತೆ ಮಾಡುವುದಕ್ಕೆ ಶ್ರಮಪಟ್ಟು ಪ್ರಯತ್ನಗಳನ್ನು ಮಾಡುತ್ತಾ ಬರಬೇಕಾಗಿದೆ.

ಪಂಡಿತ ಜವಾಹರಲಾಲರು ಮೇಲ್ಕಂಡ ಅಭಿಪ್ರಾಯಗಳುಳ್ಳ ಭಾಷಣವನ್ನು ಮಾಡಿ ಮಹಾತ್ಮಾಗಾಂಧಿಯವರಿಗೆ ಮನಃಪೂರ್ವಕವಾಗಿಯೂ, ಪ್ರೀತ್ಯತಿಶಯಗಳಿಂದಲೂ ಕೃತಜ್ಞತೆಯನ್ನು ಸಲ್ಲಿಸಿ ಕುಳಿತರು.

ಲಕ್ನೋ ಕಾಂಗ್ರೆಸ್ ಸ್ವಾಗತಾಧ್ಯಕ್ಷರಾದ ಶ್ರೀ. ಪ್ರಕಾಶರವರ ಭಾಷಣ.

ಸ್ನೇಹಿತರೇ ಮತ್ತು ಸಹೋದ್ಯೋಗಿಗಳೇ, ರಾಷ್ಟ್ರೀಯ ಮಹಾ ಸಭೆಯ ಈ 49ನೇ ಅಧಿವೇಶನದಲ್ಲಿ—ಅದರ ನಿಜವಾಗಿಯೂ 51ನೇ ಅಧಿವೇಶನ—ಭಾಗವಹಿಸಲು ಒಂದಿರುವ ನಿಮ್ಮೆಲ್ಲರನ್ನೂ ನಾನು ಸಂಯುಕ್ತ ಪ್ರಾಂತ್ಯದ ಪರವಾಗಿ ಸ್ವಾಗತಿಸುತ್ತೇನೆ. ನನ್ನ ವ್ಯವಸ್ಥೆಯಲ್ಲಿ ಕುಂದುಕೊರತೆಗಳು ಕಂಡುಬರುವುದು ಸ್ವಾಭಾವಿಕವಾದ್ದರಿಂದ ನಾನು ಆ ವಿಚಾರವನ್ನೇ ಎತ್ತುವದಿಲ್ಲ. ಮತ್ತು ಈ ಬಗ್ಗೆ ಕ್ಷಮೆ ಬೇಡುವುದು ಕಪಟದಂತಿರುವದರಿಂದ ಅದನೂ ಮಾಡುವದಿಲ್ಲ. ನನ್ನ ಕಷ್ಟನಷ್ಟಗಳನ್ನು ನಾನೇ ಮಾಡಿಕೊಂಡಿರುವುದರಿಂದಲೂ ಈ ಬಗ್ಗೆ ಯಾವ ಶಿಕ್ಷೆಯನ್ನಾದರೂ ಅನುಭವಿಸಲು ನಾವು ಅರ್ಹರಿರುವದರಿಂದಲೂ ನಾನು ಅದರ ವಿಚಾರವಾಗಿ ವಾದ ಮಾಡಲು ಬಯಸುವುದಿಲ್ಲ.

ಕಳೆದ ಸಾರಿ ಮುಂಬಯಿಯಲ್ಲಿ ನಾವು ಸೇರಿದ ಮೇಲೆ ಇತ್ತೀಚೆಗೆ ಅನೇಕ ಸಹೋದರ ಸಹೋದರಿಯರು, ರಾಷ್ಟ್ರ ಸೇವಾ ಧುರೀಣರು ನಮ್ಮನ್ನು ಬಿಟ್ಟು ಅಗಲಿದ್ದಾರೆ. ರಾಷ್ಟ್ರದ ಈ ಅಪಾರ ನಷ್ಟದ ಬಗ್ಗೆ ಕಾಂಗ್ರೆಸು ಶರಾವು ಪಾಸು ಮಾಡಿ ತನ್ನ ಹೃದಯ ವ್ಯಕ್ತ ಮಾಡುವದು. ಅಗಲಿದ ತನ್ನ ಬಾಂಧವರಲ್ಲಿ ಈ ಪ್ರಾಂತ್ಯಕ್ಕೆ ಸಂಬಂಧಿಸಿದ ಇಬ್ಬರ ವಿಚಾರವನ್ನು ಮಾತ್ರ ನಾನು ಇಲ್ಲಿ ಹೇಳುತ್ತೇನೆ. ಶ್ರೀಮತಿ ಕಮಲಾ ನೆಹರುರವರ ಮರಣದಿಂದ ನಮ್ಮ ಅಧ್ಯಕ್ಷರು ಶ್ರೇಷ್ಠ ಪತ್ನಿಯನ್ನು ಕಳೆದುಕೊಂಡರಷ್ಟೇ ಅಲ್ಲದೆ ನಾವೆಲ್ಲರೂ ನಮ್ಮ ಕಮಲಜೀಯನ್ನು ಕಳೆದುಕೊಂಡೆವು. ಶ್ರೀ ಶರ್ವಾಣಿಯವರ ಮರಣದಿಂದ ರಾಷ್ಟ್ರದ ಹಿರ್ಯ ಅಪ್ರತಿಮ ಸೇವಕರು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದವರು ಹೋದಂತಾಯಿತು. ಅವರ ಸಹೋದರರಿಗೂ ಸಂಸಾರದ ಬೇರೆ ಜನರಿಗೂ ಇದು ನಾವು ಸಹಾನುಭೂತಿ ವ್ಯಕ್ತಮಾಡುತ್ತೇವೆ.

ಬಹು ಜನರ ಬಾಯಲ್ಲಿರುವ ಕಲ್ಸಿಲ್ ಪ್ರವೇಶ ಮತ್ತು ಮುಂಕ್ರಿಸದ ಸ್ವೀಕಾರ ಪ್ರಶ್ನೆಗಳಿಗೆ ಹೆಚ್ಚು ಮಹತ್ವವಿಲ್ಲವೆಂದು ನಾನು ನಂಬುತ್ತೇನೆ ಅವುಗಳನ್ನು ತನ್ಮಷ್ಟಕ್ಕೇ ಬಿಟ್ಟುಬಿಡುವದು ಒಳ್ಳೆಯದು. ಸಮೂಜದ ಮನಸ್ಯವಸ್ಥೆಗಾಗಿ ನಾವು ಕಾಂಗ್ರೆಸಿನವರು ಪ್ರಯತ್ನಪಡುತ್ತಿದ್ದೇವೆಂದು ನಾನು ನಿಃಸಂದೇಹವಾಗಿ ಹೇಳಬಲ್ಲೆನು. ಇಂದಿನ ಪರಿಸ್ಥಿತಿಯನ್ನು ಹೆಚ್ಚು ದಿನ ಅನುಭವಿಸುವದು ಸಾಧ್ಯವಿಲ್ಲ. ಒಂದು ಕಡೆ ಶ್ರೀಮಂತರು ವೈಭವವಿಲಾಸಗಳಲ್ಲಿ ಲೋಲುಪ್ತರಾಗಿ ಮೆರೆಯುವುದನ್ನೂ, ಮತ್ತೊಂದು ಕಡೆ ಬಡತನ ದಾರಿದ್ರ್ಯಗಳ ಬೇಗೆಯು ಜನರನ್ನು ದಹಿಸುತ್ತಿರುವದನ್ನೂ ಕಂಡು ಇನ್ನೂ ತಾಳುವುದು ಸಾಧ್ಯವಿಲ್ಲ. ಒಂದು ಕಡೆ ಜನರು ಅನಿಯಮಿತ ಅಧಿಕಾರದಿಂದ ಮೆರೆಯುವುದೂ, ಇನ್ನೊಂದು ಕಡೆ ಜನರು ಗುಲಾಮಗಿರಿಯಲ್ಲಿ ಬಾಳುವದೂ ನನಗೆ ಸರಿಬೀಳುವುದಿಲ್ಲ. ಕೆಲಸ ಮತ್ತು ಕೂಲಿಯ ಸಂಯೋಜನೆ, ಸಮನಾದ ವ್ಯವಸ್ಥೆಗಾಗಿ ಸ್ವಾತಂತ್ರ್ಯ ಮತ್ತು ಕ್ಷೇಮಪೂರಿತ ಸಮೂಜ ಸಾಧನೆಗಾಗಿ ನಾವು ಇದ್ದೇವೆ

ಸದ್ಯದ ಪರಿಸ್ಥಿತಿಯನ್ನು ಅವಲೋಕಿಸುವುದೂ ಅಥವಾ ಮುಂದಿನ ಕಾರ್ಯಕ್ರಮಗಳ ಒಗ್ಗೆ ಸಲಹೆ ಕೊಡುವುದೂ ನನ್ನ ಕೆಲಸವಲ್ಲ. ಆದರೂ ಕಾಂಗ್ರೆಸಿನ ಹಿರ್ವ ಸಾಮಾನ್ಯ ಸೇವಕನಾದ ನಾನು, ನಮ್ಮ ಇತರ ರಾಷ್ಟ್ರ ಸೇವಾ ಕಾರ್ಯದಂತೆಯೇ ರಾಜಕೀಯ ಸೇವಾ ರಂಗದಲ್ಲಿಯೂ ಬರಬಹುದಾದ ಅಡ್ಡಿ ಆತಂಕಗಳನ್ನು ನನ್ನ ಅಲ್ಪ ಜ್ಞಾನ ಮತ್ತು ಅನುಭವಗಳ ದೃಷ್ಟಿಯಿಂದ ನಿಮ್ಮ ಮುಂದೆ ಇಡಲು ಈ ಸುಸಂಧಿಯನ್ನು ಉಪಯೋಗಿಸಿಕೊಳ್ಳುತ್ತೇನೆ ದೊಡ್ಡ ದೊಡ್ಡ ವ್ಯಕ್ತಿಗಳಲ್ಲಿ ನನಗೆ ಇದ್ದ ಮಹತ್ವವು ಅಳಿದುಹೋಗಿದೆ ಎಂದು ಹೇಳಿದರೆ ಇಲ್ಲಿರುವ ನನ್ನ ಸ್ನೇಹಿತರಿಗೆ ಭ್ರಾಂತಿಯೂಗಲಾರದೆಂದು ನಾನು ಅಶಿಸುತ್ತೇನೆ. ಆಗೋಡರ ವ್ಯಕ್ತಿಯೇ ನನಗೆ ಮುಖ್ಯನು. ಹೊಲದಲ್ಲಿ, ಗಿರಣಿಗಳಲ್ಲಿ, ಗುಡಿಸಲಿನಲ್ಲಿ, ಬೀದಿಯಲ್ಲಿ ವಿಶ್ರಾಂತ ದುಡಿಯುತ್ತಿರುವ ಸಾಮಾನ್ಯ ಮನುಷ್ಯನಿಗೇ ನಾನು ಹೆಚ್ಚು ಮಹತ್ವವನ್ನು ಕೊಡುವುದು. ನನ್ನ ಎಲ್ಲಾ ಪ್ರಯತ್ನಗಳ ಗುರಿಯೂ ಅವನ ಏಳಿಗೆಗೇ ಎಂದು ನಾನು ಭಾವಿಸುತ್ತೇನೆ. ಎಲ್ಲಾ ಶ್ರೇಷ್ಠ ಸಿದ್ಧಿಗಳೂ ಭಗೀರಥ ಪ್ರಯತ್ನಗಳೂ ಆ ಸಾಮಾನ್ಯ ಮನುಷ್ಯನನ್ನು ಮುಂದೆ ತಂದಿದ್ದರೆ, ಅವನ ಜೀವನವನ್ನು ಸುಧಾರಿಸಿದ್ದರೆ ನೀರಿನಲ್ಲಿ ಹೋಮವಾಡಿದಂತೆಯೇ ಸರಿ. ಹಿಂದೆ ನಮ್ಮಲ್ಲನೇಕರು ಮಹಾ ಪುರುಷರಿದ್ದರು. ಈಗಿರುವ ಮಹಾ ಪುರುಷರೆಲ್ಲರೂ ನಮ್ಮವರೇ ಎಂದು ನಾವು ಹೆಮ್ಮೆ ಪಡಬಹುದು. ಮಹಾ ಪುರುಷರು ಎಂದಿನಂತೆ ಇಂದೂ ಕೂಡ ಬರುವರು, ಇರುವರು, ಮತ್ತು ಹೋಗುವರು. ಆದರೆ ಜನತೆಯು ಮಾತ್ರ ಮೊದಲಿನಂತೆ ಅಂಧ ಕೂಪದಲ್ಲಿ, ದಾರಿದ್ರ್ಯದಲ್ಲಿ, ಬಡತನದ ಬೇಗೆಯಲ್ಲಿ, ದುಷ್ಟತ ಮತ್ತು ದುರವಸ್ಥೆಗಳಲ್ಲಿ ಉಳಿಯುವುದು. ಅವರ ಈ ಸ್ಥಿತಿಯನ್ನು ಸುಧಾರಿಸಲು ಏನನ್ನಾದರೂ ಮಾಡಬೇಕು. ಹಿಂದೆ ಮಹಾ ಪುರುಷರಾಗಿದ್ದವರು ಇಂದು ಕಲ್ಲು ವಿಗ್ರಹಗಳೋಪಾದಿಯಲ್ಲಿ ದೇವರುಗಳಂತೆ ದೇವಾಲಯಗಳಲ್ಲಿ ಪೂಜಾ ವಸ್ತುಗಳಾಗಿ ಕುಳಿತಿದ್ದಾರೆ. ಈ ಪದ್ಧತಿಯಿಂದ ಜನತೆಯ ಕರ್ತವ್ಯವು ಮಹಾ ಪುರುಷರನ್ನು ಪೂಜಿಸುವುದು ಮಾತ್ರವಲ್ಲದೆ ಅವರನ್ನನುಸರಿಸುವದಿಲ್ಲ.

ಮುಖಂಡರ ಕರೆಯನ್ನು ಸ್ವಾಗತಿಸಿ ಅವರ ಕಾರ್ಯದಲ್ಲಿ ಜನತೆಯು ಸಹಕರಿಸಿದ ಹೊರತು ಮುಖಂಡರ ಕಾರ್ಯಗಳೆಲ್ಲವೂ ನಿರರ್ಥಕವಾಗುವದೆಂಬುದನ್ನು ನಾವಿನ್ನೂ ತಿಳಿದಿಲ್ಲ ಆದರೆ ದೊಡ್ಡವರ ಮೇಲೆ ಬಹುಮಾನದ ಭಾರ ಹೇರುವ, ಅವರನ್ನು ಮೆರವಣಿಗೆಯಲ್ಲಿ ಕರಕೊಂಡು ಹೋಗುವ ಮಾನ ಪತ್ರಗಳನ್ನರ್ಪಿಸುವ ಕಾಲವನ್ನು ಸಾಕೆಂದು ನನಗೆ ಅನಿಸುತ್ತದೆ. ಅದೇ ಸಮಯದಲ್ಲಿ ನಾವು ಶಿಸ್ತಿನ ಜೀವನ ವಿಧಗಳನ್ನು ತಯಾರಿಸಿ ಅವು ಮಾನವ ಸ್ವಭಾವಕ್ಕೆ ಸರಿ ಹೋಗುವಂತೆ ಮಾಡಿ ಎಲ್ಲ ಜನರೂ ತಪ್ಪದೇ ಅವುಗಳನ್ನು ಅನುಸರಿಸಬೇಕೆಂದು ಹೇಳಬೇಕು. ಇದರಂತೆ ನಡೆಯುವನೆನು ಎಷ್ಟೇ ಸಾಮಾನ್ಯ ಮನುಷ್ಯನಾದರೂ ರಾಷ್ಟ್ರ ಧರ್ಮ ಮಹಾ ಪುರುಷನೆಂದು ಭಾವಿಸಬೇಕು ಯಾಕೆಂದರೆ ಹಿಡಿದ ಕೆಲಸವನ್ನು ಕರ್ತವ್ಯ ಮತ್ತು ಜವಾಬ್ದಾರಿಯ ಭಾವನೆಯಿಂದ ಮಾಡುವುದೇ ದೊಡ್ಡಸ್ತಿಕೆಯು. ಈ ಮಾರ್ಗದಿಂದಲೇ ನಾವು ನಮ್ಮ ಕೋಟ್ಯಾಂತರ ಸಹೋದರ ಸಹೋದರಿಯರಲ್ಲಿ ಆಶಾ ಜನಕವಾಗುವಂತೆ ಮಾಡಿ ಅವರನ್ನು ಸಂಘಟಿತ ಮಾಡಿಕರೆತಂದು ಕಾರ್ಯ ಕರ್ತರನ್ನಾಗಿ ಮಾಡಬಲ್ಲೆವು. ಈ ರೀತಿಯಿಂದಲೇ ನಾವು ಇಂದಿನ ಭಾರತೀಯ ಜೀವನದಲ್ಲಿ ತಲೆದೋರುತ್ತಿರುವ ದ್ವೇಷಾಸೂಯೆಗಳನ್ನು ಓಡಿಸಬಲ್ಲೆವು

ಇಂದು ಉತ್ತಮ ಸ್ಥಿತಿಯಲ್ಲಿರುವವರು, ಅಧಿಕಾರ ಐಶ್ವರ್ಯಗಳ ಶಿಖರದಲ್ಲಿ ಮೆರೆಯುತ್ತಿರುವವರು, ತಮ್ಮ ಸಹೋದರರು, ಒಡಕನ ದಾರಿದ್ರ್ಯಗಳಲ್ಲಿ ಬಳಲುತ್ತಿರುವಾಗ, ಅಜ್ಞಾನಾಂಧ ಕೂಪದಲ್ಲಿ ಬಿದ್ದಿರುವಾಗ ತಾವು ಆ ರೀತಿ ಮೆರೆಯುವುದು ಸರಿಯಲ್ಲವೆಂಬುದನ್ನು ಮರೆಯದಿರಲಿ. ಬಡತನವು ಭಾಗ್ಯವಂತರನ್ನು ಇದಿರಿಸುವದು. ಅದು ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುವುದು ಸ್ವಾಭಾವಿಕವೇ ಆಗಿದೆ. ಶ್ರೀಮಂತರ ಪಕ್ಕದಲ್ಲಿ ದರಿದ್ರರೂ. ರೋಗಿಗಳೂ, ವಿದ್ಯಾಹೀನರೂ ಇರುವದರಿಂದ ಕ್ರಮೇಣ ಶ್ರೀಮಂತರಿಗೆ ದುಸ್ಪರಿಣಾಮವಾಗುವುದರಲ್ಲಿ ಸಂದೇಹವಿಲ್ಲ.

ಕರ್ಕಸಿದ್ದ ಕಾರ್ಯಗಳನ್ನೂ, ಸಂಯೋದ ಯೋಜನೆಗಳನ್ನೂ ಒಪ್ಪಿ ಅವುಗಳನ್ನನುಸರಿಸುವ ಜನರಿಲ್ಲದ ಹೊರತು ಎಲ್ಲವೂ ನಿಷ್ಪಲವಾಗುವದು. ಇಂದು ಭಾರತ ಮಾತೆಗೆ ಸತ್ಯಸ್ಥೈರ್ಯ ಪುರುಷರ ಅವಶ್ಯಕತೆ ಇದೆ. ತಾಯಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಹೃತ್ಪೂರ್ವಕವಾಗಿ ಕೆಲಸಮಾಡಬಲ್ಲ ಧೀರ, ವೀರ ಸಪ್ರಜೆಗಳು ಬೇಕಾಗಿದ್ದಾರೆ; ಇವರಿಲ್ಲದ ಹೊರತು ನಾವೇ ಸನ್ನೂ ಪಡೆಯಲಾರೆವು; ಕಾಗದದ ಮೇಲೆ ನಮ್ಮ ತಾವುಗಳು ಎಷ್ಟೇ ಪೂರ್ಣವಾಗಿದ್ದರೂ ಸಭೆಯಲ್ಲಿ ನಮ್ಮ ಕಂಠಶಕ್ತಿಯು ಎಷ್ಟೇ ಬಲವಾಗಿ ಇತ್ತರೂ ಅವನ್ನು ಕೇಳಿ ಅನುಸರಿಸುವ ಜನರಿಲ್ಲದಿದ್ದರೆ ಎಲ್ಲವೂ ವ್ಯರ್ಥವಾಗವುದು. ನಮ್ಮ ಸೇವೋದ್ಯೋಗಿಗಳ ಕಳೆದ 15 ವರ್ಷದ ಅನುಭವವು ಎಲ್ಲರಿಗೂ ಒಂದು ಪಾಠವನ್ನು ಕಲಿಸಿದೆ, ನಿಜವಾಗಿಯೂ ಸ್ವತಂತ್ರರಾಗಬೇಕೆಂಬ ಉತ್ಕಟೇಚ್ಛೆಯು ನಮ್ಮಲ್ಲಿದ್ದರೆ ನಮ್ಮ ವಿರುದ್ಧ ಇರುವ ಶಕ್ತಿಗಳ ಆಂತರಿಕ ಸ್ವಭಾವವನ್ನು ಕಂಡೂ ಸುಮ್ಮನಿರಲು ಸಾಧ್ಯವಿಲ್ಲ. ಸರ್ಕಾರವು ಒಂದು ಇತೀ ಸುವ್ಯವಸ್ಥಿತ ಸಂಸ್ಥೆಯಾಗಿ. ಅದರ ಪ್ರತಿಯೊಂದು ವಿಭಾಗಕ್ಕೂ ತನ್ನದೇ ಆದ ಕರ್ತವ್ಯ ಜವಾಬ್ದಾರಿಗಳು ಗೊತ್ತಿದ್ದು, ಅದರ ಎಲ್ಲಾ ಕೆಲಸಗಳೂ ಸರಳ ರೀತಿಯಿಂದ ಸಾಗುತ್ತಿವೆ ಇದನ್ನೆಲ್ಲ ಬಿರಿಸುವದಕ್ಕಾಗಿ ನಾವೂ ಸುಸಂಘಟಿತರಾಗಬೇಕಲ್ಲದೆ ಎಲ್ಲಾ ಶಾಖೆಗಳೂ ನಮ್ಮ ವಿರುದ್ಧ ಪ್ರಶ್ನೆದವು ಶಾಖೆಗಳಂತೆಯೇ ಕೆಲಸ ಮಾಡಬೇಕು, ಇದನ್ನು ಸಾಧಿಸಿದ ಹೊರತು ನಮ್ಮ ಎಲ್ಲಾ ಪ್ರಯತ್ನಗಳೂ ವಿಫಲವಾಗುವಂತಲ್ಲದೆ, ಪ್ರತಿಯೊಂದು ಜಳವಳದ ಅಂತ್ಯದಲ್ಲಿಯೂ ನಮ್ಮ ಸ್ಥಿತಿಯು ಯಥಾಸ್ಥಿತಿಯಲ್ಲಿರುವದು. ನಮ್ಮ ದೇಶದ ಇತಿಹಾಸದ ದುರ್ದೈವವಾದರೂ ಮೊದಲಿನಿಂದಲೂ ಇದೇ ಇರುವದು. ಪ್ರತಿಸಾರಿಯೂ ಮೊದಲಿನಿಂದಲೇ ಪ್ರಾರಂಭವಾಗಬೇಕಾಗಿರುವದು. ಈ ರೀತಿ ಹಿಂದೆ ಹೋಗದಂತೆ ಮಾಡಿ, ಮುಂದಡಿ ಇಡಲು ಕಾಂಗ್ರೆಸು ವ್ಯವಸ್ಥೆ ಮಾಡಲಿ; ಕಕ್ಷಲೆಯು ಕವಿದು ನೆರೆ ಹೊರೆಯ ರಾಷ್ಟ್ರಗಳ ಅಪಹಾಸ್ಯಕ್ಕೆ ಗುರಿಯಾಗದಿರುವದಕ್ಕಾಗಿ ನಮ್ಮ ಗತವೈಭವವು ಇಡೀ ಜಗತ್ತಿಗೆ ಗೊತ್ತಾಗುವದಕ್ಕಾಗಿ, ಹಲ ಕೆಲವು ಪುಣ್ಯ ಪುರುಷರು ನಮ್ಮ ಚರಿತ್ರೆಯನ್ನು ಬೆಳಗಲಿ. ನಾವು ಇಂದು ಹೊಂಟಿರುವದು ಸತ್ಯಸ್ವಾತಂತ್ರ್ಯ ಸಾಧನೆಗಾಗಿ ಮತ್ತು ಇಡೀ ಜನತೆಯ ಕೀರ್ತಿಗಾಗಿ ಎಂಬುದು ಜಗತ್ತಿಗೆ ಕಂಡು ಬರಲಿ. ನಾವು ಸದಾ ಎಚ್ಚರಿಕೆಯಿಂದಲೂ, ಸಮಧಾನದಿಂದಲೂ ಇರಬೇಕು. ಅಂತ್ಯದಲ್ಲಿ ಸಫಲವಾಗುವದು ಪ್ರತಿ ದಿನದ ಕಾರ್ಯವೇ ಹೊರತು ಒಂದೇ ಸಾರಿ ಮಾಡಿದ ಕಾರ್ಯವಲ್ಲ. ಸಮರ ಸನ್ನಾಹಕ್ಕಿಂತ ಶಾಂತಿ ಸನ್ನಾಹವೇ ಶ್ರೇಷ್ಠ. ಯಾಕೆಂದರೆ ಶಾಂತಿ ಸ್ಥಾಪನೆಯಾದ ಮೇಲೆ ಸಮರದ ಸಂದರ್ಭವೇ ಬರುವದಿಲ್ಲ. ಒಂದು ವೇಳೆ ಬಂದರೂ ಶೀಘ್ರವಾಗಿ ಮಾಯವಾಗುವದು.

ನಮ್ಮ ಮುಂದಿನ ಕಾರ್ಯವು ಅತ್ಯಂತ ಪ್ರಬಲವಿರುವದು. ಸ್ವರಾಜ್ಯ ಸಾಧನೆಗಾಗಿ ನಾವು ಇಂದು ಹೊಂಟಿದ್ದೇವೆ. ಸ್ವರಾಜ್ಯ ಸಾಧನೆಯು ನಮ್ಮ ಗತವೈಭವ ಪ್ರಾಪ್ತಿಯಷ್ಟೇ ಅಲ್ಲದೆ ಗತ ಅತ್ಮವನ್ನು ಪಡೆಯುವದೂ ಆಗಿದೆ. ನಮ್ಮ ನಮ್ಮ ಜೀವನಗಳನ್ನು ನಮ್ಮ ನಮ್ಮ ಮನಸ್ಸಿಗೆ ತೋರಿದಂತೆ ಬದಲಾಯಿಸಿಕೊಳ್ಳುವದಕ್ಕಾಗಿ ನಮಗೆ ಸ್ವರಾಜ್ಯವು ಬೇಕು. ವಿಶ್ವ ವಿಚಾರ ಮತ್ತು

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಮಹಿಷಾಹುತಿ.

ಕೊಡಗು ದೇಶವು ಪುಣ್ಯಕ್ಷೇತ್ರಗಳ ನೆಲೆಬೀಡಾಗಿರುವು ದಾಗಿರುತ್ತದೆ. ಶ್ರೀ ಕಾವೇರಿ, ಇಗ್ಗುತಪ್ಪ, ಶ್ರೀ ಶಾಂತ ಮಲ್ಲೇಶ್ವರ ಮಲ್ಲಿಕಾರ್ಜುನ ಸ್ವಾಮಿಗಳ ಪ್ರಸಿದ್ಧ ಪುಣ್ಯ ದೇವಾಲಯಗಳಿವೆ. ಈ ಪುಣ್ಯ ಸ್ಥಳವು ಹಿಂದೂಸ್ಥಾನದ ಬೇರೆ ಕಡೆಗಳಿಗಿಂತ ಅಧಿಕವೆಂದು ಜನರು ಆಡಿಕೊಳ್ಳುವದಾಗಿ ರುತ್ತದೆ. ಇಲ್ಲಿಯ ಭೂಮೂತೆಯು ಬೆಟ್ಟಪ್ರದೇಶಗಳಿಂದಲೂ, ರಮ್ಯ ವನಸ್ಪತಿಗಳಿಂದಲೂ, ಇಂಪಾದ ತಂಗಾಳಿಯಿಂದಲೂ, ಫಲಭರಿತವಾದ ಸಸ್ಯಗಳಿಂದಲೂ ನೋಡುವವರ ಮನಸ್ಸನ್ನು ಆಕರ್ಷಿಸಿ ಆನಂದಪಡಿಸುವ ದೇಶವಾಗಿರುತ್ತದೆ. ಈ ದೇಶಕ್ಕೆ ಹೊರಗಿನಿಂದಲೂ ಜನರು ಬಂದು ಜೀವನ ಮಾಡುತ್ತಾರೆ. ಇಲ್ಲಿಯ ಜನರು ಹೊರಗೆ ಹೋಗಿ ಜೀವನ ಮಾಡುವವರು ಬಹಳ ಕಡಿಮೆ ಎಂದರೆ ತಪ್ಪಾಗಲಾರದು.

ಕೆಲವು ವರ್ಷಗಳ ಹಿಂದೆ ಈ ಪುಣ್ಯ ಪ್ರದೇಶದ ಕೆಲವು ಸ್ಥಳಗಳಲ್ಲಿ ಮಹಿಷಾಹುತಿಯನ್ನು ನಿಲ್ಲಿಸಬೇಕೆಂದು ಹಲವು ಮಹಾಶಯರುಗಳು ಚಳವಳಿಯನ್ನೆಬ್ಬಿಸಿ ಶತಪ್ರಯತ್ನ ಮಾಡಿ ಈ ಭೂಮೂತೆಯ ಕೃಪೆಗೆ ಪಾತ್ರರಾಗಿ ಪುನೀತರಾದರು. ಈ ಮಹಿಷಾಹುತಿಯನ್ನು ನಿಲ್ಲಿಸಲು ಶತಪ್ರಯತ್ನವನ್ನು ತೆಗೆದು ಕೊಂಡ ಮಹನೀಯರುಗಳಿಗೆ ಅನೇಕ ಧನ್ಯವಾದಗಳು.

ಸೋಮವಾರಪೇಟೆ ನಾಡು ಕುಂದಳ್ಳಿ ಗ್ರಾಮದಲ್ಲಿ ಈ ಗ್ರಾಮಸ್ಥರುಗಳಲ್ಲದೆ ಕೂತಿ, ಬೆಟ್ಟದಳ್ಳಿ, ಕೊತ್ತನಳ್ಳಿ, ಗ್ರಾಮಸ್ಥರು ಸಹ ಸೇರಿ ತಾರೀಕು 27—12—36ನೇ ಭಾನು ವಾರ ಎಮ್ಮೆಸುಗ್ಗಿ ಎಂಬ ಹಬ್ಬವನ್ನು ಆಚರಿಸುವದಾಗಿರುತ್ತದೆ. ಈ ಹಬ್ಬಕ್ಕೆ ಒಂದು ತಿಂಗಳ ಮುಂದೆ ನಾಲ್ಕು ಗ್ರಾಮದ ಸ್ಥರು ಸೇರಿ ಎಮ್ಮೆಗೆ ಹೊನ್ನು ಕಟ್ಟುವದೆಂದು ಒಂದು ಎಮ್ಮೆಯನ್ನು ಒಂದು ಕೋಣನನ್ನು ತರಲು ರೂಪಾಯಿಗಳನ್ನು ನಾಲ್ಕು ಗ್ರಾಮಸ್ಥರಿಂದಲೂ, ಈ ಸುಗ್ಗಿ ದೇವರ ಮುಕ್ಕಾಟಿಗಳಿಂದಲೂ ಶೇಖರಿಸಿ ಈ ಹರಿಜನ ಮುಕ್ಕಾಟಿಯವರ ಕೈಯಲ್ಲಿ ಕೊಡು ತ್ತಾರೆ. ಸುಗ್ಗಿ ದೇವರ ಹರಿಜನ ಮುಕ್ಕಾಟಿಗಳು ಈ ಹಣ ವನ್ನು ತೆಗೆದುಕೊಂಡು ಒಂದು ಎಮ್ಮೆಯನ್ನೂ ಒಂದು ಕೋ ಣನನ್ನೂ ತೆಗೆದುಕೊಂಡು ಬಂದು ಅವುಗಳನ್ನು ಇಲ್ಲಿನ ಉತ್ತ ಮೇಜಾತಿ ದೇವರ ಮುಕ್ಕಾಟಿಯವರಿಗೆ ವಹಿಸುತ್ತಾರೆ. ಇವರು ಮೇಲ್ಕಂಡ ಹಬ್ಬದ ದಿನ ಬರುವ ವರೆಗೆ ಈ ಎರಡು ಬಡ ಜೀ ವಿಗಳನ್ನು ಚೆನ್ನಾಗಿ ಪಾಲನೆ ಮಾಡುತ್ತ ಬಂದು ಹಬ್ಬದ ದಿನ ಕುಂದಳ್ಳಿಯಲ್ಲು ನಡೆಯುವ ಎಮ್ಮೆ ಕಟ್ಟುವ ರಂಗ ಎಂಬ ಸ್ಥಳಕ್ಕೆ ತಂದು ಕಟ್ಟಿ ಹಾಕುತ್ತಾರೆ. ಹಬ್ಬದ ದಿನ ಎಲ್ಲಾ ಭಕ್ತಾದಿಗಳು ಬಂದು ದೇವರಿಗೆ ಕಪ್ಪ ಕಾಣಿಕೆಯನ್ನೆಲ್ಲ ಒಪ್ಪಿ ಸಿದನಂತರ ಎಮ್ಮೆಯನ್ನು ಕುಂದಳ್ಳಿ ಗ್ರಾಮಕ್ಕೆ ಸೇರಿದ ನಗ ದಳ್ಳಿಯಲ್ಲಿರುವ ದೇವಿ ಬನ ಎಂಬಲ್ಲಿಗೆ ತೆಗೆದುಕೊಂಡು ಹೋಗಿ ನಾಲ್ಕು ಜನ ದೇವರ ಮುಕ್ಕಾಟಿಗಳಲ್ಲೊಬ್ಬರು ಪಥೆ ಮಾಡುತ್ತಾರೆ. ಕೋಣವನ್ನು ಸದರಿ ಗ್ರಾಮದ ನಾಡಪ್ಪ ನ ಎಂಬಲ್ಲಿಗೆ ತೆಗೆದುಕೊಂಡು ಹೋಗಿ ಮೇಲ್ಕಂಡ ಮುಕ್ಕಾಟಿಯವರಲ್ಲೊಬ್ಬನು ವಧೆ ಮಾಡುತ್ತಾನೆ.

ಈ ಹಿಂಸಾಹುತಿಯನ್ನು ವರ್ಣಿಸಲು ಅಸಧ್ಯವಾಗಿದೆ ಕೊಡಗಿನಲ್ಲು ಇದು ಒಂದು ಜಾಗದಲ್ಲು ಮಾತ್ರ ಇಂತಹ ಹಿಂಸಾಹುತಿಯು ಇರುವದಲ್ಲದೆ ಬೇರೆ ಯಾವ ಕಡೆಯಲ್ಲೂ ಇಲ್ಲವಾಗಿ ತಿಳಿಯುವದಾಗಿರುತ್ತೆದೆ ಇದನ್ನು ನಿಲ್ಲಿಸಲು ದೇಶದ ಮುಂದಾಳುಗಳು ಮತ್ತು ಸರಕಾರದವರು ಶತಪ್ರಯ ತ್ನದಿಂದ ಮೇಲ್ಕಂಡ ದಿವಸ ಹಿಂಸಾಹುತಿಯಾಗುವ ಎರಡು ಬಡ ಪ್ರಾಣಿಗಳ ಪ್ರಾಣವನ್ನು ಕಾಪಾಡಿ ಕೊಡಗಿನ ಪುಣ್ಯ ಕ್ಷೇತ್ರವನ್ನು ಪಾವನ ಮಾಡಬೇಕಲ್ಲದೆ ಪುಣ್ಯವನ್ನು ಗಳಿಸಬೇಕಾಗಿ ಬೇಡುವ,

ಮನಸೊಂದವ.

ಕೋ-ಆಪರೇಟಿವ್ ಇನ್ಶೂರೆನ್ಸ್.

ದೇಶ ಭಾಂದವರೇ,

ನನ್ನ ಗಂಡ ಬಲಗೈ ಚೆನ್ನಪ್ಪನವರು 2 ತಿಂಗಳ ಹಿಂದೆ ಪ್ರಾ ತಾಗಿ ಹೋದರು ಅವರು ಜೀವಂತರಾಗಿರುವಾಗ್ಯೆ ಅಂದರೆ ತಾರೀಕು 21—6—35 ರಲ್ಲು ದಕ್ಷಿಣ ಹಿಂದುಸ್ಥಾನದ ಸಹಕಾರಿ ಜೀವವಿಮೆ ಕಂಪೆನಿಯ ಕೊಡಗಿನ ಸ್ಥಳೀಕ ಬೋರ್ಡಿಗೆ 250 ರೂಪಾಯಿಗಳಿಗೆ ನಮ್ಮೂರಿನ ಸಹಕಾರಿ ಸಂಘಗಳ ಸುಪ ರ್‌ವೈಸರು ವಿಮೆಮಾಡಿಸಿದ್ದರು. ಮತ್ತು ಅವರು ಒಂದು ಕಂ ತಿನ ಬಾಪ್ತು ರೂ 10—15 ಪ್ರೀಮಿಯಂ ಸಹ ಕಟ್ಟಿದ್ದರು. ಈಚೆಗೆ ಅವರು ಪ್ರಾತಾದ ಕೆಲವು ದಿವಸಗಳಲ್ಲಿ ಸದರಿ ಸುಪರ್‌ವೈಸರು ಬಂದು ಆ ಬಗ್ಯೆ ಕೊಟ್ಟಿದ್ದ ವಾಲಿಸಿ ವಗೈರೆಯನ್ನು ಕೇಳಿಕೊಂಡರು. ಅನಂತರ 2 ತಿಂಗಳಲ್ಲಿ ನನಗೆ ಸ್ಥಳೀಕ ಬೋರ್ಡಿನವರು 251—2—0 ಆಣೆ ಕಳುಹಿಸಿಕೊಟ್ಟರು. ಸದರಿ ಹಣದಿಂದ ನನ್ನ ಗಂಡನ ಹೆಬ್ಬಾಲೆ ಪಂಚಮ ಸಂಘದಿಂದ ಭೂಮಿ ಗಿರ್ವಿ ಆದಾರದ ಮೇಲೆ ಹೊಂದಿಕೊಂಡ 214 ರೂಪಾಯಿಗಳನ್ನು ಮರುಪಾವತಿ ಮಾಡಿದನು. ಮತ್ತು ಬಾಕಿ ಇರುವ 37—2—0 ನನ್ನ ಮತ್ತು ನನ್ನ ಮಕ್ಕಳ ಜೀವನಕ್ಕೂ ಅನುಕೂಲವಾಯಿತು. ನನ್ನ ಗಂಡನು ಹಾಗೆ ಏನೆ ಮಾಡಿದ್ದಲ್ಲು ಸಂಘಕ್ಕೆ ಗಿರ್ವಿಯಾದ ಭೂಮಿಯನ್ನು ಬಿಡಿಸಿಕೊಳ್ಳಲಿಕ್ಕೆ ಯಾವ ರೀತಾವು ಇರಲಿಲ್ಲ. ಆದುದರಿಂದ ನನ್ನ ಭೂಮಿಯು ಸಹ ಸಂಘದ ಸಾಲಕ್ಕೆ ಹರಾಜಾಗಿ ಹೋಗುತ್ತಿತ್ತಲ್ಲದೆ ನಮ್ಮ ಮುಂದಿನ ಜೀವನಕ್ಕೂ ಸಹ ತುಂಬಾ ಅಡಚಣೆಯಾಗುತ್ತಿತ್ತು.

ಇದಕ್ಕಾಗಿ ನಮ್ಮ ದೇಶಕ್ಕೆ ಸದರಿ ಏನೆ ಸಂಘದ ಸ್ಥಳೀಕ ಬೋರ್ಡನ್ನು ಏರ್ಪಡಿಸಿದ ಮತ್ತು ಒಂದು ಪೈ ಖರ್ಚಿಲ್ಲದೆ ಸದರಿ ಮೊಬಲಗನ್ನು ಕಳಹಿಸಿಕೊಟ್ಟ ವ. ರಾ. ಮನೆಯ ಪಂಡ ಬೆಳ್ಯಪ್ಪನವರಿಗೂ ಮತ್ತು ನನ್ನ ಗಂಡನು ಏನೆ ಮಾಡ ಬೇಕೆಂದು ಪ್ರೋತ್ಸಾಹ ಮಾಡಿದ ಸುಪರ್‌ವೈಸರುವರಿಗೂ ನನ್ನ ಧನ್ಯವಾದಗಳು

ಇಂಥಾ ಸುವ್ಯವಸ್ಥಿತ ಸ್ಥಳೀಕ ಬೋರ್ಡಿಗೆ ಕೊಡಗಿನ ಎಲ್ಲಾ ಮಹನೀಯರುಗಳು ಪ್ರೋತ್ಸಾಹಕೊಡಬೇಕಾಗಿ ನನ್ನ ವಿನಂತಿ.

ಬಲಗೈ ದೇವಿ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಸೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇರೆ ರಸೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಸೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಚಿ ಮೊದಮೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಚ್ಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ. ಬೆಳ್ಳಿಯಂಡ ಯಂ. ಪೂಣ[illegible]ನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಸೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಲಾಭಕರವಾದದ್ದು ಯಾವುದು



501 ಮೊಕ್ಕಿನ ಒಂದು ಇಡೀ ಸಾಬೂನೋ ಯಾ ಅರ್ಧ ನೀರು ಮತ್ತು ಅರ್ಧ ಸಾಯೂನಿರುವ ಮತ್ತಿತರ ಸಾಬೂನುಗಳೋ?

ಅನೇಕ ಸುಲಭ ಕ್ರಯದ ಸಾಬೂನುಗಳಲ್ಲಿ ಅರ್ಧಾಂಶವು ನೀರಾಗಿರುತ್ತೆ. ಆದ್ದರಿಂದಲೇ ಅವು ಫಕ್ಕನೆ ನೀರಾಗುವುದು. 501 ಸಾಬೂನು ಅತೀ ಸುಲಭ ಖರ್ಚಿನದು. ಯಾಕೆಂದರೆ ಅದು ಒಳ್ಳೇ ಗಟ್ಟಿ ಸಾಬೂನು. ಅದರಲ್ಲಿ ಅವಶ್ಯಕವಾದಷ್ಟೇ ನೀರಿನ ಅಂಶವಿರುವುದು.

ಮೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಿಮೆ!

ಟಾಮ್‌ಕೆಟೋ ಮೂರಾಟದ ಮೆಳಗೆ, VOMCo ೧, ಸೌಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು. **501 Soap**

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊರಬಾಯಿ, ಮತ್ತು ತಾತಾಪುರ.

52-47. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನ್ನು ಯಾವ ರೂಪದಲ್ಲಾ ಸೇರಿಸಿಲ್ಲ.

"ನವರತ್ನ ಅಲ್ಯಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನ್ನನ್ನು ಯಾವ ವಿಧದಲ್ಲಾ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರ್ 68, ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. } ಏಜೆಂಟ್—ವಿ. ಬಿ ಕಾಮತ್, ಮಹದೇವಪೇಟೆ, ಮಡಿಕೇರಿ.

52—45 ನವರತ್ನ ಫಾರ್ಮಸಿ,

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—25]

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ
ಕರ್ಕ ಕಂಪನಿ ೧೯೧೩
ಜ್ವರದ ಗುಳಿಗೆಗಳು.
ಜಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.
ಗಣೇಶ ರಾಮಚಂದ್ರ ಕರ್ಕೆ,
(25—28) ಮುತ್ತು ಕಂಪನಿ,
ಗಿರಗಾಂವ, ಮುಂಬಯಿ,

SHIRCMANI NARAYANACHARYA
Choukhamba Benares City.

THIS MAN WISHES HE HAD

THIS MAN OUR CUSTOMER

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಆಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡೆ ಪ್ರವಾಣದ ಗೌರೀಶರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸ್ವರ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ಏವಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—ಶ್ರೀ ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿಕ್ಚಂಬರ ಕೆಟಲಾಗಿನೊಂದಿಗೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—33 ಚೌಖಂಬಾ ಬೆನಾರಿಸ್, (ಕಾಶೀ)

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಅನುಸಂಧಿಬಂಧನೆಗಳೂ, ಏಕಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಂಗಳ ಕೆಲಸಗಳನ್ನು ಕ್ರಮವಾಗಿ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮುಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಟರ್ ಕೀಪರ್ ಖರಾರು ಫಾರಮುಗಳೂ ಹೊವಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ಡಿಜಸ್ಟರ್ ಪುಸ್ತಕಗಳೂ, ಮತ್ತು ಜೆಂ ಪುಸ್ತಕಗಳೂ ನಮ್ಮ ವಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಒಂಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್
ಕೊಡಗು ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,
26—26 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸಯುಳ್ಳ
ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:
ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾನುಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.
ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.
ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.
ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನಂಬಿರಿ.
ಪತಿವ್ರತೆಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸ್ಮಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.
ಹೆಚ್ಚಿನ ವಿವರಕ್ಕೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
26— 8 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು
"ಮೈಸೂರು ಗಂಧದ ಸಾಬೂನು."



ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.
ಗವರ್ನಮೆಂಟ್ ಸೋಪ್ ಫಾಕ್ಟರಿ.
52—7 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾವ ಶೇರ್ ಮೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾಪ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂಪ ಕೊಡಗು ದೇಶದ ಸಹಕಾರಿ ಸಂಘಗ ಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ವಾ ಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲ ಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಂದ್ಯಂಡ ಐ. ಬೆಳ್ಯಪ್ಪನವರು.

ಪ್ರೈಜರ್
ರಾ. ಸಾ. ಸಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ಯಾಲು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜ ಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿ ಯಲ್ಲಿರುವ ಒಂದು ದೊಡ್ಡ ಸಮಸ್ಯೆಯೂಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂಗಿಯೂ ಸುದೃಢ ವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವ ವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫ ಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಸುತ್ತಲಿರುವರು ಮಗುವು ಹಡ್ಡು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಅಗಿಂ ದಾಗ್ಯೆ ತೀಕ್ಷ, ಕೆಮ್ಮು ಮೊದಲಾದ ರೋಗಗಳಿಗೀಡಾ ಗಿರುವಾಗಲೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—7) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—21

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಪಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿ ಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯೂಗುವದು. ಹೆಂಗಸರಿಗೂ. ಗಂಡಸರಿಗೂ ಇದು ಗುಣಕಾರಿ ಇವೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯೂಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಿಗನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4-0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ವೋಸ್ತ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

52—32 ಕೊಡಗಿನ ಏಜಂಟರು—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

೧೮೭೪ರಲ್ಲಿ ಇಂಡಿಯೂದಲ್ಲಿ ಸ್ಥಾಪನೆಯೂದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....	ರೂ.	16,29,88,814
ಫಂಡ್ಸ್ ಹೆಚ್ಚಿದ್ದು		ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಢಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇಟ್ರೇಡ್, ಬೆಂಗಳೂರು,

52—14

ಎಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P. I. Belliappa at 'Kodagu' Press, Mercara for "Kodagu" Ltd.